
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2015
ಬೆಲೆ ರೂ. 1



ಮಹಿಳೆಯರ ಸಬಲೀಕರಣದಿಂದ ದೇಶದ ಪ್ರಗತಿ

ಮಹಿಳೆಯರ ಸುರಕ್ಷತೆ

ಸಮಾನತೆಯ ಭವ್ಯ ಕನಸು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 6
ಮಾರ್ಚ್ 2015, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜು: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮು ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ


## ನೇರ ಮಾತು

ಕರ್ನಾಟಕ ಸರಕಾರ ಅಥವಾ ಕನ್ನಡನಾಡಿನ ಸಂಘಟನೆಗಳು ಕರ್ನಾಟಕದ ಕಲೆ, ಸಂಸ್ಕೃತಿ, ಸಾಹಿತ್ಯವನ್ನು ಒಳನಾಡಿನಲ್ಲಿ ಅಂದರೆ ರಾಜ್ಯಮಟ್ಟದಲ್ಲಿ ಮನ್ನಣೆಗೊಳಿಸುವಂತಹ ಕೆಲಸಕ್ಕೆ ಸೀಮಿತವಾಗಿ ಇದನ್ನು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗಬೇಕೆಂಬ ಕೆಲಸವನ್ನು ಮಾಡುತ್ತಿರುವ ಉದಾಹರಣೆಗಳು ಅತೀ ವಿರಳ. ಎಂಟು ಜ್ಞಾನಪೀಠ ಪ್ರಶಸ್ತಿಗಳು ಕನ್ನಡಕ್ಕೆ ಬಂದರೂ ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತ್ಯವಾಗಲೀ, ಸಾಹಿತಿಗಳಾಗಲಿ ರಾಷ್ಟ್ರಮಟ್ಟದಲ್ಲಿ ದೊಡ್ಡ ಸುದ್ದಿಯಾಗದೇ ಕರ್ನಾಟಕಕ್ಕೆ ಸೀಮಿತವಾಗಿ ಉಳಿದಿರುವುದು ದುರಂತ. ಕನ್ನಡ ಸಾಹಿತ್ಯವನ್ನು ಇತರ ಭಾಷೆಗಳಿಗೆ ಕೇವಲ ಭಾಷಾಂತರ ಮಾಡಿ ಪುಸ್ತಕ ಮುದ್ರಣ ಮಾಡಿದ ಮಾತ್ರಕ್ಕೆ ಅದು ಜನರನ್ನು ತಲುಪುವುದಿಲ್ಲ. ಬದಲಾಗಿ ಕೃತಿಗಳ ಕುರಿತು, ಸಾಹಿತಿಗಳ ಕುರಿತು ನಿರಂತರವಾಗಿ ದೊಡ್ಡ ಮಟ್ಟದ ವಿಚಾರ ಸಂಕಿರಣಗಳು ಜರಗಬೇಕು. ಇತರ ಭಾಷೆಯ ಪ್ರಮುಖ ಮಾಧ್ಯಮಗಳಲ್ಲಿ ಇದು ಚರ್ಚೆಯಾಗಬೇಕು. ಆಗ ಮಾತ್ರ ನಿಜವಾದ ರಾಷ್ಟ್ರೀಯ ಮಾನ್ಯತೆ ಸಿಕ್ಕಂತಾಗುವುದು.

ಹೊರನಾಡ ಕನ್ನಡಿಗರು ಕುವೆಂಪು, ಬೇಂದ್ರೆ, ಕಾರಂತ, ಅಡಿಗ ಹೀಗೆ ಕನ್ನಡದ ಹಿರಿಯ ಸಾಹಿತ್ಯ ದಿಗ್ಗಜರ ಹೆಸರಲ್ಲಿ ಒಂದು ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಂಡು ಕನ್ನಡದ ಸಾಹಿತ್ಯ ಕೃಷಿಯ ಪರಿಚಯವನ್ನು ರಾಷ್ಟ್ರದಾದ್ಯಂತ, ವಿಶ್ವವ್ಯಾಪಿ ಪಸರಿಸುವ ಪ್ರಯತ್ನವನ್ನು ಸದಾ ಮಾಡುತ್ತಲೇ ಇರುತ್ತಾರೆ. ತಾಯ್ನಾಡಿನಿಂದ ಹೊರ ಪ್ರದೇಶಗಳಿಗೆ ಹೋಗಿ ನೆಲೆನಿಂತ ಕನ್ನಡಿಗರು ಒಟ್ಟು ಸೇರಿ ಕನ್ನಡದ ಸಂಘಟನೆಗಳನ್ನು ಕಟ್ಟಿಕೊಂಡು ನಡೆಸುವ ಕಾರ್ಯಕ್ರಮಗಳು ಮೇಲ್ನೋಟಕ್ಕೆ ತಮ್ಮ ಇರುವಿಕೆ, ಒಟ್ಟು ಸೇರುವಿಕೆ ಹಾಗೂ ಮನೋರಂಜನೆಗಾಗಿ ಮತ್ತು ತಾಯ್ನಾಡಿನ ಸಾಂಸ್ಕೃತಿಕ ಜೀವನವನ್ನು ಜೀವಂತವಾಗಿರಿಸಿಕೊಳ್ಳುವುದಕ್ಕಾಗಿ ಎಂದು ಅನಿಸುತ್ತದೆ. ಆದರೆ ವಾಸವಾಗಿ ಹೊರನಾಡಿನ ಕನ್ನಡ ಸಂಘಟನೆಗಳು ದೇಶ, ವಿದೇಶದ ಪ್ರಮುಖ ಕೇಂದ್ರಗಳಲ್ಲಿ ವಿವಿಧ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕರ್ನಾಟಕವನ್ನು ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುವ ಮತ್ತು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ದೊರೆಕಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತಾರೆ. ಅರ್ಥಾತ್ ಕರ್ನಾಟಕದ ಸಾಹಿತ್ಯ–ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಾರೆ.

ಕರ್ನಾಟಕದ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ 2014ರ ಸಾಲಿನ 5 ಲಕ್ಷ ರೂಪಾಯಿಗಳನ್ನೊಳಗೊಂಡ ಕುವೆಂಪು ರಾಷ್ಟ್ರೀಯ ಪ್ರಶಸ್ತಿಯನ್ನು ಹಿಂದಿಯ ಪ್ರಸಿದ್ಧ ಲೇಖಕ ಶ್ರೀ ನಾಮವರ್ ಸಿಂಗ್ ಅವರಿಗೆ ನೀಡುತ್ತಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಮಾಡುತ್ತಿರುವುದು ಕರ್ನಾಟಕ ಸಂಘಕ್ಕೆ ಹೆಮ್ಮೆಯ ಮತ್ತು ಪ್ರತಿಷ್ಠೆಯ ವಿಚಾರ.

ಕರ್ನಾಟಕ ಸಂಘ ಮುಂಬೈ ಕಳೆದ ಹತ್ತೊಂಬತ್ತು ವರ್ಷಗಳಿಂದ ರಾಷ್ಟ್ರಮಟ್ಟದ ಕುವೆಂಪು ನಾಟಕ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬಂದಿದೆ. ಈ ವರ್ಷದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ನಾನು ಪಾಲ್ಗೊಂಡಿದ್ದೆ. ಮುಂಬಾಯಿ ಕರ್ನಾಟಕ ಸಂಘ ಹಮ್ಮಿಕೊಳ್ಳುವ ಕನ್ನಡದ ಕಾರ್ಯಗಳನ್ನು ಗಮನಿಸಿದಾಗ ದೆಹಲಿ ಕರ್ನಾಟಕ ಸಂಘ ಮಾಡುವ ಕೆಲಸಕಾರ್ಯಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಕೊಳ್ಳುವಂತಹ ಅವಕಾಶ ನನ್ನದಾಗಿತ್ತು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಸಂಘದಲ್ಲಿ ಕಾರ್ಯಕ್ರಮಗಳು ಪ್ರತಿ ವಾರ ನಡೆಯುತ್ತಾ ಬಂದಿದೆ. ಈ ಬಾರಿಯ ಬಿ.ವಿ. ಕಾರಂತ ರಂಗೋತ್ಸವ ಖ್ಯಾತ ಚಲನಚಿತ್ರ ನಟ ನಿರ್ದೇಶಕ ಶ್ರೀ ಟಿ.ಎಸ್. ನಾಗಾಭರಣ ಅವರ ನೇತೃತ್ವದಲ್ಲಿ ಪು.ತಿ.ನ. ಅವರ ಗೋಕುಲ ನಿರ್ಗಮನವನ್ನು ಶ್ರುತಾಲಯ ಬೆಂಗಳೂರು ತಂಡದವರು, ಡಾ. ಚಂದ್ರಶೇಖರ ಕಂಬಾರ ಅವರ ಜೋಕುಮಾರಸ್ವಾಮಿಯನ್ನು ಬೆಂಗಳೂರಿನ ರಾಗಮಾಧುರಿ ತಂಡದವರು, ಹಯವದನ ಗಿರೀಶ್ ಕಾರ್ನಾಡರ ಉತ್ತಮ ನಾಟಕಗಳಲ್ಲಿ ಒಂದಾಗಿದ್ದು ಇದನ್ನು ರಂಗದ ಮೇಲೆ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸುವಲ್ಲಿ ಬೆನಕ ತಂಡದ ನಟರು ಪ್ರೇಕ್ಷಕರ ಮನಗೆದ್ದರು. ಇದರ ಜೊತೆಗೆ ಸಮುದಾಯ ತಂಡ ಪ್ರಸ್ತುತಪಡಿಸಿದ ತುಘಲಕ್ ನಾಟಕ ಕೂಡ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು.

ಈ ಎಲ್ಲರ ಜೊತೆಗೆ ಮಹಿಳಾ ದಿನಾಚರಣೆಯು ಅದ್ದೂರಿಯಾಗಿ ಮೂಡಿ ಬಂದಿದೆ. ಬರುವ ತಿಂಗಳಲ್ಲಿ ಮಕ್ಕಳ ಪರೀಕ್ಷೆ ಮುಗಿದ ನಂತರ ನಾಟಕ ತರಬೇತಿ, ರಂಗಾಯಣ ಮೈಸೂರು ಹಾಗೂ ನೃತ್ಯ ತರಬೇತಿ, ಬಾಯ್‌ರ್ಘೋನ್ ತಂಡ, ಮಂಗಳೂರು ಹಾಗೂ ಸುಗಮ ಸಂಗೀತ ತರಬೇತಿಯನ್ನು ನೀಡುವ ಎಲ್ಲಾ ಕೆಲಸಗಳು ನಡೆಯುತ್ತಿವೆ. ಈ ಎಲ್ಲದರ ಜೊತೆಗೆ ತುಳು ಸಂಭ್ರಮ, ಕೊಂಕಣಿ ಮತ್ತು ಕೊಡವ ಕಾರ್ಯಕ್ರಮಗಳನ್ನು ನಡೆಸಲು ಸಿದ್ಧತೆಗಳು ನಡೆಯುತ್ತಿವೆ. ಮಾರ್ಚ್ 22ರಂದು ನಡೆಯಲಿರುವ ತುಳು ಸಂಭ್ರಮದಲ್ಲಿ ಗುರುಕಿರಣ್ ತಂಡವು ಭಾಗವಹಿಸಲಿದೆ. ಬನ್ನಿ ಒಟ್ಟಾಗಿ ಜೊತೆಗೂಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ.

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳು ಏಪ್ರಿಲ್‌ನಿಂದ ಪ್ರತಿ ಶನಿವಾರ ಮತ್ತು ಭಾನುವಾರದಂದು ನಡೆಯಲಿದೆ. ಕನ್ನಡ ಕಲಿಯಲಿಚ್ಛಿಸವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ಭಾಗಹಿಸಬೇಕಾಗಿ ವಿನಂತಿ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ಕುವೆಂಪು ರಾಷ್ಟ್ರೀಯ ಪುರಸ್ಕಾರ

**15 ಮಾರ್ಚ್ 2015** ಭಾನುವಾರ ಅಪರಾಹ್ನ 3.30ಗಂಟೆಗೆ

ದೆಹಲಿ ಕರ್ನಾಟಕ ಸಂಘ ಮತ್ತು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕುಪ್ಪಳಿ ಇವರ ಸಹಯೋಗದೊಂದಿಗೆ ಪ್ರಸಿದ್ಧ ಹಿಂದಿ ಸಾಹಿತಿ ಪ್ರೊ. ನಾಮವರ್ ಸಿಂಗ್ ಅವರಿಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ–2014 ಹಾಗೂ ಕುವೆಂಪು ಗೀತೆಗಳಿಗೆ–ನೃತ್ಯರೂಪಕ, ಲಾಸ್ಯವರ್ಧನ ಟ್ರಸ್ಟ್, ಬೆಂಗಳೂರು ಮತ್ತು ರಾಮಚಂದ್ರ ಜಿ. ಅಡಪದ್ ಮತ್ತು ತಂಡದಿಂದ ಕುವೆಂಪು ರಚಿತ ಹಾಡುಗಳು.

## ಮಹಿಳಾ ಯಕ್ಷಗಾನ

**22 ಮಾರ್ಚ್ 2015** ಭಾನುವಾರ ಸಂಜೆ 5.30 ಗಂಟೆಗೆ

ಬಡಗುತಿಟ್ಟು ಮಹಿಳಾ ಯಕ್ಷಗಾನ 'ಮಾಗದ ವಧೆ'
ಯಕ್ಷಸಿರಿ, ಬೆಂಗಳೂರು ಇವರಿಂದ ಮತ್ತು
ವಿದ್ಯಾರ್ಥಿ ವೇತನ ವಿತರಣೆ

## ತಿಂಗಳ ನಾಟಕ

**28 ಮಾರ್ಚ್ 2015** ಶನಿವಾರ ಸಂಜೆ 5.30 ಗಂಟೆಗೆ

ನಾಟಕ : ಅಜ್ಜಿ ಆಸ್ತಿ
ರಚನೆ : ಶ್ರೀಯುತ ದಾಶರಥಿ ದೀಕ್ಷಿತ್
ಪ್ರಸ್ತುತಿ : ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್
ನಿರ್ದೇಶನ : ಶ್ರೀ ಟಿ.ಎಂ. ಮೈಲಾರಪ್ಪ

## ದಶಮಾನೋತ್ಸವ ವಿಶೇಷ ಕಾರ್ಯಕ್ರಮ

**29 ಮಾರ್ಚ್ 2015** ಭಾನುವಾರ ಸಂಜೆ 5.00 ಗಂಟೆಗೆ

ಸ್ಥಳೀಯ ಕಲಾವಿದರಿಂದ ಹಾಗೂ ಮಂಗಳೂರು ಬಾಯ್‌ರ್ಘೋನ್ ತಂಡದಿಂದ Folk Dance, Semi Classical, Contemporary, Bollywood & Hiphop ನೃತ್ಯ ಪ್ರದರ್ಶನ

## ತುಳು ಸಂಭ್ರಮ

**12 ಏಪ್ರಿಲ್ 2015** ಭಾನುವಾರ ಸಂಜೆ 2.00 ಗಂಟೆಗೆ

ಗುರುಕಿರಣ್ ಸಂಗೀತ ಸಂಭ್ರಮ–ತುಳು–ಕೊಂಕಣಿ–ಕನ್ನಡದಲ್ಲಿ ಖ್ಯಾತ ಗಾಯಕರಾದ ಗುರುಕಿರಣ್, ಅನುರಾಧ ಭಟ್ ಮತ್ತು ರೊಸರಿಯೋ ಅವರಿಂದ ಸಂಗೀತ, ನೃತ್ಯ ಕಾರ್ಯಕ್ರಮಗಳು.
ತುಳು ಚಲನಚಿತ್ರ ಪ್ರದರ್ಶನ–'ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ'

## ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**19 ರಿಂದ 23 ಮಾರ್ಚ್ 2015**

**ಮಂಜುನಾಥ್ ಕನ್ನೂರು, ಬಿಜಾಪುರ** ಅವರಿಂದ ಚಿತ್ರಕಲಾ ಪ್ರದರ್ಶನ.

## ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ

**22 ರಿಂದ 28 ಮಾರ್ಚ್ 2015** ವಿವಿಧ ನೃತ್ಯ ತರಬೇತಿ

ತರಬೇತಿ ನೀಡುವವರು : ಬಾಯ್‌ರ್ಘೋನ್ ತಂಡ, ಮಂಗಳೂರು

**1 ರಿಂದ 18 ಏಪ್ರಿಲ್ 2015** ನಾಟಕ ತರಬೇತಿ

ತರಬೇತಿ ನೀಡುವವರು : ಮೈಸೂರು ರಂಗಾಯಣ

**19 ಏಪ್ರಿಲ್ 2015** ಭಾನುವಾರ ಸಂಜೆ 6.00 ಗಂಟೆಗೆ

ನಾಟಕ ಪ್ರದರ್ಶನ ಮತ್ತು ಕನ್ನಡ ಭಾರತಿ ಪ್ರಶಸ್ತಿ ಪ್ರದಾನ

**11 ರಿಂದ 16 ಮೇ 2015** ಸಂಗೀತ ತರಬೇತಿ

**17 ಮೇ 2015** ಭಾನುವಾರ ಸಂಜೆ 6.00 ಗಂಟೆಗೆ

ಸಂಗೀತ ತರಬೇತಿ ಪಡೆದವರಿಂದ ಕಾರ್ಯಕ್ರಮ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಮಾರ್ಚ್ 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಮಾರ್ಚ್ 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29, ಮಾರ್ಚ್ 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 29 ಮಾರ್ಚ್ 2015 ರಂದು ಸಾಯಂಕಾಲ 4 ಗಂಟೆಯಿಂದ.

## ಕನ್ನಡ ತರಗತಿಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳು ಏಪ್ರಿಲ್‌ನಿಂದ ಪ್ರತಿ ಶನಿವಾರ ಮತ್ತು ಭಾನುವಾರದಂದು ನಡೆಯಲಿದೆ. ಕನ್ನಡ ಕಲಿಯಲಿಚ್ಛಿಸುವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ಭಾಗಹಿಸಬೇಕಾಗಿ ವಿನಂತಿ.

## ಸಂಘದ ಗುರುತು ಚೀಟಿ

ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳಿಗೆ (ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿರುವ) ಐ.ಡಿ.ಕಾರ್ಡ್‌ನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ದಯವಿಟ್ಟು ತಮ್ಮ ಇತ್ತೀಚಿನ ಭಾವಚಿತ್ರದ ಜೊತೆಗೆ ವಿಳಾಸ, ದೂರವಾಣಿ ಸಂಖ್ಯೆಗಳು ಬದಲಾಗಿದ್ದಲ್ಲಿ ಕೂಡಲೇ ಸಂಘದಲ್ಲಿ ಲಿಖಿತ ಮೂಲಕ ಬದಲಾಯಿಸಿಕೊಳ್ಳಬೇಕಾಗಿ ವಿನಂತಿ.

*ಪ್ರಧಾನ ಕಾರ್ಯದರ್ಶಿ*

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**

# ಸಂಘದಲ್ಲಿ ಬಿ.ವಿ. ಕಾರಂತ 85 ರಂಗೋತ್ಸವ



ದೆಹಲಿ ಕರ್ನಾಟಕ ಸಂಘವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಬೆಂಗಳೂರಿನ ಬೆನಕ ತಂಡದ ಸಹಯೋಗದಲ್ಲಿ ಬಿ.ವಿ. ಕಾರಂತ 85 ರಂಗೋತ್ಸವವನ್ನು ಇದೇ ಫೆಬ್ರವರಿ 7 ಮತ್ತು 8 ರಂದು ಸಂಘದ ಸಭಾಂಗಣದಲ್ಲಿ ನಡೆಸಿತು. ಈ ರಂಗೋತ್ಸವದಲ್ಲಿ ದೆಹಲಿಯಲ್ಲಿ ಕನ್ನಡ ಭಾರತಿಯನ್ನು ಸ್ಥಾಪಿಸಿ ಕನ್ನಡ ನಾಟಕಗಳನ್ನು ದೇಶದ ರಾಜಧಾನಿಯಲ್ಲಿ ಪ್ರದರ್ಶಿಸಿದ ಸುಪ್ರಸಿದ್ಧ ರಂಗಕರ್ಮಿ ಬಿ.ವಿ. ಕಾರಂತ ಅವರು ನಿರ್ದೇಶಿಸಿದ್ದ ಮೂರು ನಾಟಕಗಳನ್ನು ಪ್ರದರ್ಶಿಸಲಾಯಿತು.





ಪು.ತಿ.ನ. ಅವರ ಗೋಕುಲ ನಿರ್ಗಮನವನ್ನು ಶ್ರುತಾಲಯ ಬೆಂಗಳೂರು ತಂಡದವರು ಫೆಬ್ರವರಿ 7ರಂದು ಪ್ರದರ್ಶಿಸಿದರು. ಗೋಕುಲ ನಿರ್ಗಮನ ಬಿ.ವಿ. ಕಾರಂತರಿಗೆ ಜಗತ್ತಿನಾದ್ಯಂತ ಹೆಸರು ತಂದು ಕೊಟ್ಟ ಕವಿ ಪು.ತಿ. ನರಸಿಂಹಚಾರ್ ಅವರ ಕೃತಿಯನ್ನಾಧರಿಸಿದ ಸಂಗೀತ ನಾಟಕ. ತಂಡದ ಲವಲವಿಕೆಯ ಕಲಾವಿದರು ಕೃಷ್ಣನ ಮಥುರವನ್ನೇ ರಂಗದ ಮೇಲೆ ಸೃಷ್ಟಿ ಮಾಡಿ ತಮ್ಮ ಗಾನ-ನೃತ್ಯಗಳಿಂದ ಜನರ ಮನಸೆಳೆದರು. ಉತ್ತಮ ಹಿನ್ನೆಲೆ ಸಂಗೀತ, ಅದಕ್ಕೊಪ್ಪುವ ವೇಷಭೂಷಣಗಳು, ಬೆಳಕಿನ ವ್ಯವಸ್ಥೆ ನಾಟಕವನ್ನು ಅತ್ಯಂತ ಶ್ರದ್ಧೆಯಿಂದ ನೋಡುವಂತೆ ಪ್ರೇಕ್ಷಕರನ್ನು ಎರಡು ತಾಸುಗಳಿಂತ ಹೆಚ್ಚು ಕಾಲ ಹಿಡಿದಿಟ್ಟುಕೊಂಡಿತು.

ಡಾ. ಚಂದ್ರಶೇಖರ ಕಂಬಾರ ಅವರ ಜೋಕುಮಾರಸ್ವಾಮಿಯನ್ನು ಬೆಂಗಳೂರಿನ ರಾಗಮಾಧುರಿ ತಂಡದವರು ಫೆಬ್ರವರಿ 8ರಂದು ಪ್ರದರ್ಶಿಸಿದರು. ಇದು ಡಾ. ಕಂಬಾರ ಅವರ ಉತ್ತರ ಕರ್ನಾಟಕದ ಜನಪದ ಸಾಹಿತ್ಯವನ್ನು ಆಧರಿಸಿದ ಒಂದು ಅತ್ಯಮೋಘ ನಾಟಕ. ನಾಟಕದಲ್ಲಿ ಬರುವ ಗೌಡ ಮತ್ತು ಗೌಡತಿಯ ಪಾತ್ರ, ಶಬರಿ, ಸೂಳೆಯ ಪಾತ್ರ ಅತ್ಯಂತ ಮನಮೋಹಕವಾಗಿ ಮೂಡಿಬಂದವು. ಉತ್ತಮ



ಮೇಳ, ಸಂಗೀತ, ಪ್ರಸಾದನ ಮತ್ತು ಬೆಳಕಿನ ವ್ಯವಸ್ಥೆಯೊಂದಿಗೆ ಕಲಾವಿದರು ತಮ್ಮ ಉತ್ತಮ ನಟನೆಯೊಂದಿಗೆ ಪ್ರೇಕ್ಷಕರ ಮನಗೆದ್ದರು.

ಅದೇ ದಿನ ಸಂಜೆ ಪ್ರದರ್ಶಿಸಲಾದ ಹಯವದನ ಗಿರೀಶ್ ಕಾರ್ನಾಡರ ಉತ್ತಮ ನಾಟಕಗಳಲ್ಲಿ ಒಂದಾಗಿದ್ದು ದೇಶವಿದೇಶಗಳಲ್ಲಿ ಹಲವಾರು ಪ್ರದರ್ಶನಗಳನ್ನು ಕಂಡ ಒಂದು ಮಹಾನ್ ಕೃತಿ. ನಾಟಕದ ಒಟ್ಟು ವಸ್ತುವನ್ನು ರಂಗದ ಮೇಲೆ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸುವಲ್ಲಿ ಬೆನಕ







ತಂಡದ ನಟರು ಬಹಳಷ್ಟು ಶ್ರಮಪಟ್ಟು ಪ್ರೇಕ್ಷಕರ ಮನಗೆದ್ದರು. ಕಪಿಲ, ದೇವದತ್ತ ಮತ್ತು ನಾಟಕದಲ್ಲಿ ಬರುವ (ಪುಟಾಣಿಗಳಿಬ್ಬರು) ಅದ್ಭುತವಾಗಿ ನಟಿಸಿದ ಗೊಂಬೆಗಳು, ಕಾಡುದುರ್ಗೆಯ ದೃಶ್ಯ, ದೆಹಲಿ ಪ್ರೇಕ್ಷಕರ ಮನದಲ್ಲಿ ಬಹಳ ಕಾಲದವರೆಗೆ ಅಚ್ಚಳಿಯದೆ ಉಳಿಯುವ ದೃಶ್ಯಗಳಾಗಿವೆ. ಸೂತ್ರಧಾರ ಹಾಗೂ ಮೇಳದವರು ನೀಡಿದ ಸಂಗೀತ ಹಾಗೂ ಸಂಭಾಷಣೆಗಳು ನಾಟಕಕ್ಕೆ ಉತ್ತಮ ಸೊಬಗು ನೀಡಿದವು.

ಈ ಎಲ್ಲಾ ನಾಟಕಗಳು ನಿರ್ದೇಶಕ ಟಿ.ಎಸ್. ನಾಗಾಭರಣ ಅವರ ಸಂಯೋಜನೆಯಲ್ಲಿ ಅದ್ಭುತವಾಗಿ ಮೂಡಿಬಂತು. ಫೆಬ್ರವರಿಯ ಇಳಿಚಳಿಯ ದಿನಗಳಲ್ಲಿ ದೆಹಲಿಯ ರಂಗಾಸಕ್ತರಿಗೆ ಪ್ರಸಿದ್ಧ ನಾಟಕಕಾರರ ನಾಟಕಗಳು ಮನದೊಳಗೆ ಬೆಚ್ಚಗಿನ ಅನುಭವಗಳನ್ನು ನೀಡಿದವು. ಅ

***ಸಖಾರಾಮ ಉಪ್ಪೂರು***

# ಸಮುದಾಯ ತಂಡದಿಂದ ತುಘಲಕ್

ಬೆಂಗಳೂರಿನ ಸಮುದಾಯ ತಂಡದವರು ಗಿರೀಶ ಕಾರ್ನಾಡ್ ಅವರ ತುಘಲಕ್ ನಾಟಕವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಫೆಬ್ರವರಿ 19ರಂದು ಪ್ರದರ್ಶಿಸಿದರು. ಕಾರ್ನಾಡರ ಅತ್ಯಂತ ಪ್ರಭಾವಶಾಲಿಯಾದ ಈ ನಾಟಕವನ್ನು ಡಾ. ಸ್ವಾಮಕುಟ್ಟಿ ಪಟ್ಟಾಂಕಾರಿ ಅವರ ವಿನ್ಯಾಸ ಮತ್ತು ನಿರ್ದೇಶನ ಹಾಗೂ ಡಾ. ಶ್ರೀಪಾದ ಭಟ್ ಸಹ ನಿರ್ದೇಶನದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿಸಲಾಯಿತು.





ತುಘಲಕ್ ನಾಟಕ ಗಿರೀಶ್ ಕಾರ್ನಾಡರ ಇನ್ನೊಂದು ಮಹೋನ್ನತ ನಾಟಕ ಕೃತಿ. ಸಮುದಾಯದ ಕಲಾವಿದರು ಚದುರಂಗದಾಟದ ನಾಟಕ ತಂತ್ರವನ್ನು ಬಳಸಿಕೊಂಡು ಈ ಕೃತಿಗೆ ಅರ್ಥ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಮಹಮ್ಮದ್ ಬಿನ್ ತುಘಲಕನ ಗೊಂದಲದ ಮನಃಸ್ಥಿತಿ ಅರಮನೆಯೊಳಗೆ ನಡೆಯುವ ಪಿತೂರಿ ರಾಜಕೀಯ ಬೆಳವಣಿಗೆಗಳು ದೆಹಲಿಯಿಂದ ತುಘಲಕಾಬಾದಿಗೆ ರಾಜಧಾನಿಯ ಬದಲಾವಣೆ, ಬೆಳ್ಳಿಯ ಬದಲಾಗಿ ತಾಮ್ರದ ನಾಣ್ಯಗಳ ಉತ್ಪಾದನೆ ಮತ್ತು ಚಲಾವಣೆ ಹೀಗೆ ತುಘಲಕನ ಹುಚ್ಚು ಮನಸ್ಸಿನ ವ್ಯವಹಾರಗಳನ್ನು ಬಹಳ ಅರ್ಥಗರ್ಭಿತವಾಗಿ ಬಿಡಿಸಿ ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಂಗದ ಮೇಲೆ ನಟಿಸಿದ ಎಲ್ಲಾ ನಟರು, ಹಿನ್ನೆಲೆಯಲ್ಲಿ ದುಡಿದು ವೇಷಭೂಷಣ, ಬೆಳಕು ಮತ್ತು ಸಂಗೀತ ನೀಡಿದ ಎಲ್ಲ ಕಲಾವಿದರು ಪ್ರಶಂಸೆಗೆ ಯೋಗ್ಯರು. ಮಹಮ್ಮದ (ವೆಂಕಟೇಶ್), ಮಲತಾಯಿ ಹಾಗೂ ಅಗಸ ಮತ್ತು ಅಗಸನ ಶಿಷ್ಯರಾಗಿ ಕಾಣಿಸಿಕೊಂಡ ಪಾತ್ರಗಳು ತೆಮ್ಮ ಪಾತ್ರಗಳಿಗೆ ಜೀವತುಂಬುವಲ್ಲಿ ಯಶಸ್ವಿಯಾಗಿದ್ದಾರೆ. ಅ

***ಸಖಾರಾಮ ಉಪ್ಪೂರು***





# ಸುಧೀರ್ ಫಡ್ನೀಸ್ ಅವರ ಚಿತ್ರಕಲಾ ಪ್ರದರ್ಶನ



ದೆಹಲಿಯ ಸುಪ್ರಸಿದ್ಧ ಕಲಾವಿದರಲ್ಲೊಬ್ಬರಾದ ಸುಧೀರ್ ಫಡ್ನೀಸ್ ಅವರು ತಮ್ಮ ಗುರುಗಳಾದ ದಿವಂಗತ ಡಿ.ಎಚ್. ಕುಲಕರ್ಣಿ ಅವರಿಗೆ ಅರ್ಪಿಸಿದ ಬಾಟಿಕ್ ಪೇಂಟಿಂಗ್ಸ್ ಚಿತ್ರಕಲಾ ಪ್ರದರ್ಶನವನ್ನು, ಕುಲಕರ್ಣಿ ಅವರ ಸುಪುತ್ರ ಹಾಗೂ ಪ್ರಖ್ಯಾತ ಕಲಾವಿದ ವಿಲಾಸ್ ಕುಲಕರ್ಣಿ ಅವರು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಫೆಬ್ರವರಿ 24ರಂದು ಉದ್ಘಾಟಿಸಿದರು. ಭಾರತ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಜಂಟಿ ಮಹಾನಿರ್ದೇಶಕ (ವಿದೇಶ ವ್ಯಾಪಾರ) ಡಾ. ಅಮಯಚಂದ್ರ, ಐ.ಎ.ಎಸ್. ಮತ್ತು ಕೇಂದ್ರ ಜವಳಿ ಖಾತೆಯಲ್ಲಿ ಅಡಿಶನಲ್ ಡೆವಲಪ್‌ಮೆಂಟ್ ಕಮಿಷನರ್ (ಕರಕುಶಲತೆ) ಆಗಿರುವ ಶ್ರೀ ನವರಾಜ್ ಗೋಯಲ್, ಐ.ಆರ್.ಎಸ್. ಅವರು ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ದಿವಂಗತ ಕುಲಕರ್ಣಿ ಅವರು ಪ್ರಖ್ಯಾತ ಚಿತ್ರಕಲಾವಿದ ಮತ್ತು ಶಿಲ್ಪಕಲಾವಿದರಾಗಿದ್ದರು. ಅವರ ಚಿತ್ರಕಲೆಯನ್ನು ಗುರುತಿಸಿ 2002ರಲ್ಲಿ ಕೇಂದ್ರ ಜವಳಿ ಖಾತೆಯು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿತ್ತು. ಇತ್ತೀಚೆಗಷ್ಟೆ ಅಗಲಿದ, ತನ್ನ ನೆಚ್ಚಿನ ಗುರುಗಳಾದ ಡಿ.ಎಚ್. ಕುಲಕರ್ಣಿ ಅವರ ಮಾರ್ಗದರ್ಶನದಲ್ಲಿ ಮೂರು ವರ್ಷಗಳ ಕಾಲ ಬಾಟಿಕ್ ಪೇಂಟಿಂಗ್ ಕಲಿತ ಫಡ್ನೀಸರು ಗುರುಗಳು ಹಾಕಿಕೊಟ್ಟ ಹಾದಿಯಲ್ಲೇ ಈ ಬಾಟಿಕ್ ಪೇಂಟಿಂಗ್‌ನ ಮಾದರಿಯನ್ನು ಮುಂದುವರಿಸಿಕೊಂಡು ಹೋಗಲು ನಿಶ್ಚಯಿಸಿದರು. ಮುಖ್ಯವಾಗಿ ಬಾದಾಮಿ ಮತ್ತು ಅಜಂತ ಗುಹೆಗಳ ಚಿತ್ರಕಲೆಗಳನ್ನು ಆಧರಿಸಿರುವ ಈ ಬಾಟಿಕ್ ಪೇಂಟಿಂಗ್ಸ್‌ಗಳು ಅತ್ಯಂತ ಸುಂದರವಾಗಿವೆ. ಈ ಚಿತ್ರಕಲಾ ಪ್ರದರ್ಶನದ ಮೂಲಕ ಗುರುಗಳನ್ನು ನೆನಪಿಸಿಕೊಳ್ಳುವುದರ ಜೊತೆಗೆ ತಮ್ಮ ಅಗಲಿದ ತಂದೆ ತಾಯಿ, ವಸಂತ ರಾವ್ ಮತ್ತು ಇಂದಿರಾಬಾಯಿ ಫಡ್ನೀಸ್ ಅವರನ್ನು ಸಹ ಸ್ಮರಿಸಿಕೊಂಡರು.

ಸುಧೀರ್ ಫಡ್ನೀಸ್ ಅವರು ಈಗಾಗಲೇ ದೇಶ–ವಿದೇಶಗಳಲ್ಲಿ ಹತ್ತಾರು ಸೋಲೋ ಪ್ರದರ್ಶನಗಳು, 20ಕ್ಕಿಂತಲೂ ಹೆಚ್ಚು ಗ್ರೂಪ್ ಚಿತ್ರಕಲಾ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಸುಧೀರ್ ಫಡ್ನೀಸ್ ಅವರ ಕಲಾ ಪ್ರತಿಭೆಯನ್ನು ಗುರುತಿಸಿ ಕೇಂದ್ರ ಜವಳಿ ಖಾತೆಯು 2008ರಲ್ಲಿ ಮೆರಿಟ್ ಸ್ಕಾಲರ್ ಶಿಫ್ ನೀಡಿ ಗೌರವಿಸಿದೆ.

ಉದ್ಘಾಟನಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸಖಾರಾಮ ಉಪ್ಪೂರು ಅವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಶ್ರೀಮತಿ ಗೀತಾ ಫಡ್ನೀಸ್ ಅವರು ವಂದನಾರ್ಪಣೆ ಸಲ್ಲಿಸಿದರು. ಅ

*ಅಭಿಮತ ವರದಿ*





# ಮನಸೆಳೆದ ಬಾಟಿಕ್ ಕಲೆ





ಬಾಟಿಕ್ ಒಂದು ಪಾರಂಪರಿಕ ಕಲೆ. ಮೂಲತಃ ಇದು ಜಾವಾದಲ್ಲಿ ಹುಟ್ಟಿ ಬೆಳೆಯಿತು ಎನ್ನಲಾಗಿದೆ. ಆದರೆ ಇಂದು ಈ ಕಲೆ ಏಷ್ಯಾದ ಎಲ್ಲಡೆಯೂ ಜನಪ್ರಿಯವಾಗಿದೆ. ಆಫ್ರಿಕಾದಲ್ಲೂ ಇದು ನೆಲೆ ಕಂಡುಕೊಂಡಿದೆ. ಮೃದುವಾದ ಹತ್ತಿ ಮತ್ತು ರೇಶ್ಮೆಯ ಬಟ್ಟೆಯನು ಈ ಕಲೆಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಬಿಳಿ ಅಥವಾ ತಿಳಿ ವರ್ಣದ ಬಟ್ಟೆಯ ಮೇಲೆ ಪೆನ್ಸಿಲಿನಿಂದ ಬೇಕಾದ ವಿನ್ಯಾಸವನ್ನು ತುಂಬಾ ತೆಳುವಾಗಿ ಬರೆದು, ಆಮೇಲೆ ಎಲ್ಲಿ ಮೂಲ ಬಣ್ಣ ಹಾಗೆಯೇ ಇರಬೇಕೋ ಅಲ್ಲಿಗೆ ಕರಗಿದ ಬಿಸಿ ಮೇಣವನ್ನು (ಹೆಚ್ಚಾಗಿ ಜೇನಿನ ಮೇಣ) ಸವರಬೇಕು. ಉಳಿದ ಭಾಗಕ್ಕೆ ಬೇಕಾದ ಬಣ್ಣವನ್ನು ಹಚ್ಚಬೇಕು. ಕರಗಿದ ಮೇಣವನ್ನು ಬಟ್ಟೆ ಹೀರಿಕೊಳ್ಳುವುದರಿಂದ ಆ ಭಾಗ ಮೂಲ ಬಣ್ಣವನ್ನು ಉಳಿಸಿಕೊಳ್ಳುತ್ತದೆ. ಉಳಿದಂತೆ ಕಡಿಮೆ ಬಣ್ಣಗಳನ್ನು ಬಳಸಿ ಗರಿಷ್ಠ ಪರಿಣಾಮ ಬೀರಲು ಕಲಾವಿದರು ಹೆಣಗಾಡುತ್ತಾರೆ.ಇಷ್ಟೆಲ್ಲಾ ಮಾಡಬೇಕಾದರೆ ತುಂಬಾ ತಾಳ್ಮೆ ಮತ್ತು ನಾಜೂಕುತನ ಬೇಕಾಗುತ್ತದೆ.

ನಮ್ಮ ನಡುವಿನ ಮುಖ್ಯ ಕಲಾವಿದರಲ್ಲಿ ಒಬ್ಬರಾದ ಸುಧೀರ್ ಫಡ್ನೀಸ್ ಅವರು ತಮ್ಮ ಇಂಥ ನಾಜೂಕತನ ಮತ್ತು ತಾಳ್ಮೆಯ ಪರಿಣಾಮವೂ ಎಂಬಂತಿರುವ ಬಾಟಿಕ್‌ಚಿತ್ರ ಪ್ರದರ್ಶನವೊಂದನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಫೆಬ್ರವರಿ 24ರಿಂದ ಮಾರ್ಚ್ 2ರ ವರೆಗೆ ನಡೆಸಿಕೊಟ್ಟರು. ಪಡ್ನೀಸ್ ಅವರು ತಮ್ಮ ಗುರುಗಳಾದ ದತ್ತಾತ್ರೇಯ ಹನುಮಂತರಾವ್ ಕುಲಕರ್ಣಿ ಅವರ ನೆನಪಿಗೆ ಈ ಒಳ್ಳೆಯ ಪ್ರದರ್ಶನವನ್ನು ಏರ್ಪಡಿಸಿದ್ದರು.

ಕುಲಕರ್ಣಿ ಅವರು ಪ್ರಸಿದ್ಧ ಕಲಾವಿದರು. ಉತ್ತರ ಕರ್ನಾಟಕದ ನಂದಿಕೇಶ್ವರದಲ್ಲಿ ಜನಿಸಿದ (ಫೆಬ್ರವರಿ 21, 1933) ಅವರು, ದೆಹಲಿಯ ಕಾಲೇಜ್ ಆಫ್ ಆರ್ಟ್‌ನಿಂದ ಡಿಪ್ಲೋಮಾ ಪಡೆದು, ಮುಂದೆ ಬೇರೆ ಬೇರೆ ಮಾಧ್ಯಮಗಳಲ್ಲಿ ಕೆಲಸ ಮಾಡಿ ಹೆಸರುವಾಸಿಯಾದವರು. ಬಾದಾಮಿ, ಅಜಂತಾ ಮತ್ತು ಔರಂಗಾಬಾದಗಳಲ್ಲಿ ಕೆಲಸ ಮಾಡಿದ್ದ ಅವರು ಅಲ್ಲಿನ ಗುಹಾ ಚಿತ್ರಗಳಿಂದ ವಿಶೇಷ ಪ್ರಭಾವಕ್ಕೆ ಒಳಗಾಗಿದ್ದರು. 70–80ರ ದಶಕದಲ್ಲಿ ಅವರು ಬಾಟಿಕ್ ಕಲಾವಿದರಾಗಿ ಜನಪ್ರಿಯರಾಗಿದ್ದರು.

ಇವರಿಂದ ಪ್ರೇರಣೆ ಪಡೆದ ಫಡ್ನೀಸ್ ಅವರು ತಮ್ಮ ಗುರುಗಳ ನೆನಪಿನಲ್ಲಿ ಬಾದಾಮಿ, ಅಜಂತಾ ಮತ್ತು ಎಲ್ಲೋರಾಗಳ ಸಾಂಪ್ರದಾಯಕ ಗುಹಾ ಚಿತ್ರಗಳನ್ನು ತಮ್ಮ ಪ್ರದರ್ಶನದಲ್ಲಿ ಅತ್ಯಂತ ತಾಳ್ಮೆಯಿಂದ ಪುನಾರೂಪಿಸಿದ್ದಾರೆ. ಈ ಚಿತ್ರಗಳು ಹಿಂದೂ ಮತ್ತು ಬೌದ್ಧ ಧರ್ಮದ ಧಾರ್ಮಿಕ ಆವರಣದಲ್ಲಿ ಅರಳಿದಂಥವು. ಕಾರಣ ಅವುಗಳ ದೈವಿಕತೆಯನ್ನು ಬಣ್ಣಗಳಲ್ಲಿ ಹಿಡಿಯ ಬೇಕಾದರೆ ತುಂಬಾ ಶ್ರಮಿಸಬೇಕಾಗುತ್ತದೆ. ಫಡ್ನೀಸ್ ಅವರು ಪ್ರದರ್ಶನಕ್ಕಿಟ್ಟ ಬೋಧಿ ಸತ್ವ, ಚಾಲುಕ್ಯ ಚಕ್ರವರ್ತಿ ಪುಲಿಕೇಶಿ, ಪದ್ಮಪಾಣಿ, ಗೀತೋಪದೇಶ, ಮಹಾ ಶಿವ ಮೊದಲಾದ ಚಿತ್ರಗಳಂತೂ ನೋಡುಗರ ಕಣ್ಣಿಗೆ ಹಬ್ಬ ನೀಡಿದುವು. ಬಾಟಿಕ್ ಶೈಲಿಯಲ್ಲೂ ಫಡ್ನೀಸ್‌ಅವರು ಪರಿಣತರು ಎಂಬುದನ್ನು ಈ ಪ್ರದರ್ಶನ ಮನಗಾಣಿಸಿತು. ಅ

***ಡಾ. ಪುರುಷೋತ್ತಮ ಬಿಳಿಮಲೆ***

ಸಾಹಿತ್ಯ

## ರೇಣುಕಾ ನಿಡಗುಂದಿ ಅವರ ಅಮೃತ ನೆನಪುಗಳು ಹುಟ್ಟೂರಲ್ಲಿ ಬಿಡುಗಡೆ



ದೆಹಲಿಯಲ್ಲಿ ನೆಲೆಸಿ ಕನ್ನಡದಲ್ಲಿ ಸಾಹಿತ್ಯ ಸೃಜಿಸುವ ಕೆಲವೇ ಮಂದಿಗಳಲ್ಲೊಬ್ಬರಾದ ರೇಣುಕಾ ನಿಡಗುಂದಿ ಅವರ ಇತ್ತೀಚಿನ ಕೃತಿ ಇಮ್ರೋಜ್ ನೆನೆದಂತೆ ಅಮೃತಾ ಪ್ರೀತಂ–ಅಮೃತ ನೆನಪುಗಳು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಫೆಬ್ರವರಿ 8ರಂದು ಬಿಡುಗಡೆಯಾಯಿತು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ರಹಮತ್ ತರೀಕೆರೆ, ಪ್ರಾಧ್ಯಾಪಕ ಅಶೋಕ ಶೆಟ್ಟರ್, ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿ ಈ ಸಂದರ್ಭದಲ್ಲಿ ಮಾತಾಡಿದರು.

ಶಿವಮೊಗ್ಗದ ಅಹಿರ್ನಿಶಿ ಪ್ರಕಾಶನ ಪ್ರಕಟಿಸಿದ ಅಮೃತ ನೆನಪುಗಳು ಕೃತಿಯ ಜತೆಗೆ ವಿನಯಾ ಅವರ ಕಥೆಗಳು ಉರಿ ಕೂಡಾ ಬಿಡುಗಡೆಯಾಯಿತು.

ಡಾ. ರಹಮತ್ ತರೀಕೆರೆ ಅವರು ಕೃತಿಗಳ ಕುರಿತು ಮಾತಾಡುತ್ತಾ, ಭಾರತದ ಸಮಾಜದಲ್ಲಿ ಮಡುಗಟ್ಟಿದ ಹೆಣ್ಣಿನ ಅಸಾಯಕತೆ, ಚೈತನ್ಯದ ದಾರಿಗಳನ್ನು ಈ ಕೃತಿಗಳು ಹುಡುಕಾಡುತ್ತವೆ. ಪ್ರೇಮದ ಮೂಲಕ ಎಲ್ಲ ಚೌಕಟ್ಟುಗಳನ್ನು ಮೀರುವ ಸಾಧ್ಯತೆಗಳನ್ನು ಕಾಣಿಸುವಲ್ಲಿ ಈ ಕೃತಿಗಳ ಮಹತ್ವವಿದೆ ಎಂದು ಹೇಳಿದರು. ಕನ್ನಡ ಮಹಿಳಾ ಕಥನಗಳು ಪುರುಷವಾದಿ ಹಾಗೂ ಸಂಪ್ರದಾಯವಾದಿ ಚೌಕಟ್ಟುಗಳನ್ನು ಭಗ್ನಗೊಳಿಸುತ್ತಿವೆ ಎಂದು ಅವರು ಹೇಳಿದರು.

ವಿಮರ್ಶಕಿ ಡಾ. ಎಂ.ಎಸ್. ಆಶಾದೇವಿ ಅವರು ಮಾತನಾಡಿ ಈ ಎರಡೂ ಕೃತಿಗಳು ಸ್ತ್ರೀವಾದವೆನ್ನುವುದು ಬದುಕಿನ ಕ್ರಮ ಮತ್ತು ಮಾನವತಾವಾದ ಎಂಬ ನಿಲುವನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತವೆ. ಈ ಕೃತಿಗಳಲ್ಲಿ ಹೆಣ್ಣು ತನಗೆ ತಾನೇ ಮುಖಾಮುಖಿಯಾಗುತ್ತ ಎಂತಹ ಸನ್ನಿವೇಶದಲ್ಲೂ ಗುಪ್ತಗಾಮಿಯಾಗಿ ಜೀವನ ಪ್ರೀತಿಯನ್ನು ಉಳಿಸಿಕೊಳ್ಳುವ ಅನನ್ಯತೆಯನ್ನು ತೋರುತ್ತಾಳೆ ಎಂದರು.

ಪ್ರಾಧ್ಯಾಪಕ ಅಶೋಕ ಶೆಟ್ಟರ್ ಅವರು ಮಾತನಾಡಿ, ರೇಣುಕಾ ನಿಡಗುಂದಿ ಅವರ ಕೃತಿಯು ಒಂದು ಆದರ್ಶ ಪ್ರೇಮದ ಅಪರೂಪದ ಮಾದರಿಯನ್ನು ಕಟ್ಟಿಕೊಡುತ್ತದೆ ಎಂದರು.

ಡಾ. ಎಂ.ಎಂ. ಕಲಬುರ್ಗಿ, ಡಾ. ಕೆ.ಆರ್. ದುರ್ಗಾದಾಸ್, ಡಾ. ಪಂಚಾಕ್ಷರಿ ಹಿರೇಮಠ, ಡಾ. ಶಿವಾನಂದ ಗಾಳಿ, ಡಾ. ವಿಜಯಶ್ರೀ ಹಿರೇಮಠ, ಅಹರ್ನಿಶಿ ಪ್ರಕಾಶನದ ಕೆ. ಅಕ್ಷತಾ, ಡಾ. ಪ್ರಜ್ಞಾ ಮತ್ತಿಹಳ್ಳಿ, ಡಾ. ಅರುಣ್ ಜೋಳದಕೂಡ್ಲಿಗಿ ಮೊದಲಾದವರು ಉಪಸ್ಥಿತರಿದ್ದರು. ಅ

*ಅಭಿಮತ ವರದಿ*

## ಕನ್ನಡಕ್ಕೆ ರಾಷ್ಟ್ರೀಯ ಮನ್ನಣೆ ಹೊರನಾಡ ಕನ್ನಡಿಗರ ಸಾಧನೆ-ವಸಂತ ಶೆಟ್ಟಿ ಬೆಳ್ಳಾರೆ




ಕನ್ನಡದ ಹಿರಿಮೆಯನ್ನು ರಾಷ್ಟ್ರಕ್ಕೆ ಪರಿಚಯಿಸುವುದರಲ್ಲಿ ಹೊರನಾಡ ಕನ್ನಡಿಗರಿಂದ ಮಾತ್ರ ಸಾಧ್ಯವಾಗುತ್ತಿದೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅಭಿಪ್ರಾಯ ಪಟ್ಟರು. ಅವರು ಇದೇ ಫೆಬ್ರವರಿ 12 ರಿಂದ 15ರ ತನಕ ಮುಂಬಯಿಯಲ್ಲಿ ಮಾಟುಂಗ ಕರ್ನಾಟಕ ಸಂಘದ ವತಿಯಿಂದ ಏರ್ಪಡಿಸಿದ 19ನೇ ಅಖಿಲ ಭಾರತ ಕುವೆಂಪು ಸ್ಮಾರಕ ಕನ್ನಡ ಏಕಾಂಕ ನಾಟಕ ಸ್ಪರ್ಧೆ–2015ರ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು.

ದೆಹಲಿ ಕರ್ನಾಟಕ ಸಂಘವು ಕನ್ನಡದ ರಂಗಕರ್ಮಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ ಒಂದು ಪ್ರಶಸ್ತಿಯನ್ನು ಸ್ಥಾಪಿಸುತ್ತಿದೆ ಎಂದು ಅವರು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಉಪಾಧ್ಯಕ್ಷ ಶ್ರೀನಿವಾಸ ಜೋಕಟ್ಟೆ ಮಾತನಾಡಿ, ಕರ್ನಾಟಕ ಸಂಘ ಮುಂಬಯಿ ಕುವೆಂಪು ನಾಟಕ ಸ್ಪರ್ಧೆ ಆಯೋಜಿಸುವ ಮೂಲಕ ಕರ್ನಾಟಕದ ತಂಡಗಳಿಗೆ ಮುಂಬಯಿಯಲ್ಲಿ ಪ್ರದರ್ಶನಕ್ಕೆ ಅವಕಾಶಗಳು ದೊರೆಯುವಂತಾಗಿದೆ. ಮುಂಬಯಿ ಬಹುಭಾಷೆ ಬಹು ಸಂಸ್ಕೃತಿಯ ನಗರವಾಗಿದ್ದು ರಂಗಭೂಮಿ ಇಂತಹ ಸಂಸ್ಕೃತಿಯನ್ನು ಮೀರಿ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಾ ಬಂದಿದೆ ಎಂದರು.

ಸ್ಪರ್ಧೆಯ ತೀರ್ಪುಗಾರರಾಗಿ ಕನ್ನಡದ ಖ್ಯಾತ ಸಾಹಿತಿ, ವಿಮರ್ಶಕ, ಪ್ರಾಂಶುಪಾಲ ಡಾ. ಬಿ. ಜನಾರ್ಧನ ಭಟ್, ರಂಗ ನಟಿ–ನಿರ್ದೇಶಕಿ ಎಂ.ವಿ. ಪ್ರತಿಭಾ ಮತ್ತು ನಟ–ರಂಗನಿರ್ದೇಶಕ ಮಂಜುನಾಥ್ ಶೆಟ್ಟಿ ಸಹಕರಿಸಿದ್ದರು. ರಂಗ ನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು ನಿರೂಪಿಸಿ ಅತಿಥಿಗಳನ್ನು ಪರಿಚಯಿಸಿ ವಂದಿಸಿದರು. ಸ್ವಾಗತ ಮತ್ತು ಪ್ರಸ್ತಾವನೆಯನ್ನು ಸಂಘದ ಗೌರವ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಮಾಡಿದರು. ಅ

*ಅಭಿಮತ ವರದಿ*

### ದೆಹಲಿಯಲ್ಲಿ ಮೈಸೂರು ವಿ.ವಿ. ಹಳೆ ವಿದ್ಯಾರ್ಥಿ ಸಭೆ

ಮೈಸೂರು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಏಪ್ರಿಲ್ ತಿಂಗಳಿನಲ್ಲಿ ದೆಹಲಿಯಲ್ಲಿ ಸಭೆಯೊಂದನ್ನು ಆಯೋಜಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದ ಎಲ್ಲ ದೆಹಲಿ ಕನ್ನಡಿಗರು ದಯವಿಟ್ಟು ತಮ್ಮ ಹೆಸರು, ವಿಳಾಸ, ಇಮೇಲ್, ದೂರವಾಣಿ ಸಂಖ್ಯೆಯನ್ನು ದೆಹಲಿ ಕರ್ನಾಟಕ ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಡಾ. ವೆಂಕಟಾಚಲ ಹೆಗಡೆ (9312712476) ಅವರನ್ನು ಸಂಪರ್ಕಿಸಿರಿ.

### ದೇಣಿಗೆ

ದೆಹಲಿ ಕರ್ನಾಟಕ ಸಂಘ ನಡೆಸಿಕೊಂಡು ಬರುತ್ತಿರುವ ತಿಂಗಳ ನಾಟಕ ಕಾರ್ಯಕ್ರಮದಡಿಯಲ್ಲಿ ದೆಹಲಿ ಮಿತ್ರ 26 ಅಕ್ಟೋಬರ್ 2014ರಂದು ಪ್ರದರ್ಶಿಸಿದ ನಾಟಕ "ಗೋವಿಂದಾನಿ ಗೋವಿಂದ . . .ಗೋವಿಂದಾ" ತಂಡದವರು (ಡಾ.ವೈ. ಅವನೀಂದ್ರನಾಥ್ ರಾವ್, ಶ್ರೀ ಚೆನ್ನು. ಎಸ್. ಮಠದ, ಶ್ರೀಮತಿ ಜಮುನಾ ಸಿ.ಮಠದ, ಶ್ರೀ ಶಶಿಕಾಂತ ಪಾಟೀಲ್, ಶ್ರೀ ಸುಧೀರ್ ಫಡ್ನೀಸ್, ಶ್ರೀ ಶಿವಾನಂದ ಇಂಗಳೇಶ್ವರ, ಮತ್ತು ನಿರ್ದೇಶಕ ಶ್ರೀ ಸಖಾರಾಮ ಉಪ್ಪೂರು) ಸಂಘ ನೀಡಿದ ರೂ. 25000 ಗೌರವ ಸಂಭಾವನೆಯಲ್ಲಿ ತಮ್ಮ ಅಗತ್ಯಕ್ಕಷ್ಟೇ ಖರ್ಚಾದ ರೂ. 4,700ನ್ನು ಸ್ವೀಕರಿಸಿ ಉಳಿದ ರೂ. 20,300ನ್ನು "ದಿ. ಕೆ.ಆರ್. ನಾಗರಾಜ ಮೆಮೋರಿಯಲ್ ಸ್ಕಾಲರ್‌ಶಿಪ್ ಫಂಡ್"ಗೆ ದೇಣಿಗೆಯಾಗಿ ನೀಡಿದ್ದಾರೆ.

# ಉದ್ಯೋಗಸ್ಥ ಮಹಿಳೆಯರ ಆತಂಕ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡವು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಸಿದ ಹೊರನಾಡ ಕನ್ನಡಿಗರ ಮಹಾಮೇಳದಲ್ಲಿ ***ಪೃಥ್ವಿ ಕಾರಿಂಜೆ***ಯವರು 'ಉದ್ಯೋಗಸ್ಥ ಮಹಿಳೆಯರ ಆತಂಕ' ಗಳು ಎಂಬ ವಿಷಯದಲ್ಲಿ ಪ್ರಸ್ತುತಪಡಿಸಿದ ಭಾಷಣದ ಆಯ್ದಭಾಗ...

ಮಹಿಳೆಗೆ ಬಾಲ್ಯದಲ್ಲಿ ತಂದೆಯ ಆಶ್ರಯ, ಯೌವನದಲ್ಲಿ ಪತಿಯ ಆಶ್ರಯ, ವೃದ್ಧಾಪ್ಯದಲ್ಲಿ ಮಗನ ಆಶ್ರಯ ಎಂಬ ಸಾಮಾಜಿಕ ನಿಲುವು ಈಗ ಬದಲಾಗುತ್ತಿದೆ. ಉದ್ಯೋಗವೆಂಬುದು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲದೆ,ಸಾಮಾಜಿಕ ಸಾಂಸಾರಿಕ ಭದ್ರತೆಗಾಗಿಯೂ ಅಗತ್ಯ ಎಂಬುದನ್ನರಿತ ಈಗಿನ ಹೆಣ್ಣು ಮಕ್ಕಳು ಪುರುಷರಿಗೆ ಸಮನಾಗಿ ಮನೆ ಉದ್ಯೋಗ ಸಂಭಾಳಿಸುತ್ತಿದ್ದರೂ ಆತಂಕಗಳು ಅವರನ್ನು ಬಿಟ್ಟಿಲ್ಲ. ಮಹಿಳೆಗೆ ಆತಂಕ, ಅಭದ್ರತೆಗಳು ತಿಳುವಳಿಕೆ ಬಂದಲ್ಲಿಂದ ಆರಂಭಗೊಳ್ಳುತ್ತದೆ. ಮೊದಲಿಗೆ ವಿದ್ಯೆ, ಉದ್ಯೋಗದ ಕುರಿತ ಚಿಂತೆಯಾದರೆ ನಂತರ ನೋಡನೋಡುತ್ತಿದ್ದಂತೆ ಸಂಸಾರ ಹಾಗೂ ನೌಕರಿಯನ್ನು ಸರಿದೂಗಿಸಿಕೊಂಡು ಸಾಗಬೇಕಾದ ಆತಂಕ. ನೌಕರಿಗಾಗಿ ಮನೆಯಿಂದ ಹೊರಕಾಲಿಟ್ಟ ಹೆಣ್ಣು ಮಕ್ಕಳು ಮೈಯೆಲ್ಲಾ ಕಣ್ಣಾಗಿರಬೇಕಾದ ಸ್ಥಿತಿ ಇದೆ ಮನೆಯಿಂದ ಉದ್ಯೋಗದ ಸ್ಥಳವನ್ನು ತಲುಪಿ, ಮರಳಿ ಮನೆಗೆ ಬರುವ ಹಾದಿಯಲ್ಲಿ ಅನೇಕ ಕರಾಳ ಘಟನೆಗಳು ನಡೆದುದು, ನಡೆಯುತ್ತಿರುವುದನ್ನು ನಾವು ದಿನನಿತ್ಯ ದೂರದರ್ಶನದಲ್ಲೋ, ಪತ್ರಿಕೆಗಳಲ್ಲೋ ಓದುತ್ತಿರುತ್ತೇವೆ. ದೈಹಿಕ ಅಭದ್ರತೆ, ಇದು ಸಾಲದೆಂಬಂತೆ ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿ ಹಾಗು ಆಡಳಿತ ವರ್ಗದಿಂದ ಒತ್ತಡ, ಮಾನಸಿಕ ಲೈಂಗಿಕ ಕಿರುಕುಳ, ಒಳರಾಜಕೀಯಗಳು ಅದರಿಂದುಂಟಾಗುವ ಕೀಳರಿಮೆ, ಮುಂತಾದವು ಉದ್ಯೋಗಸ್ಥ ಮಹಿಳೆಯನ್ನು ಅನೇಕ ಜೀವನಶೈಲಿ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವಂತೆ ಮಾಡುತ್ತಿದೆ.

ಮಹಿಳೆಯ ರಕ್ಷಣೆಗೆ ಕಾನೂನು ಕಟ್ಟಲೆಗಳು ಎಷ್ಟಿದ್ದರೂ ಸಾಮಾಜಿಕ ಭದ್ರತೆಯ ಕೊರತೆಯಿಂದಾಗಿ ಅನೇಕ ಉದ್ಯೋಗಸ್ಥ ಮಹಿಳೆಯ ಪಾಡು ಪಡುವಂತಾಗಿದೆ. ಇನ್ನು ಕುಟುಂಬ-ಉದ್ಯೋಗ ಎರಡನ್ನೂ ಸಂಭಾಳಿಸಿಕೊಂಡು ಹೋಗುವ ಭರದಲ್ಲಿ ತನ್ನ ಆರೋಗ್ಯವನ್ನು ನಿರ್ಲಕ್ಷಿಸಿ ಕಾಯಿಲೆ ಕಸಾಲೆಗಳಿಗೆ ತಾನು ಸಂಪಾದಿಸಿದ್ದನ್ನೆಲ್ಲವನ್ನು ಸುರಿಯುವ ಪರಿಸ್ಥಿತಿ ಮಹಿಳೆಗೆ ಬಂದಿರುವುದು ಖೇದಕರ ಸಂಗತಿ. ಇಷ್ಟೆಲ್ಲದರ ಮಧ್ಯೆ ಈಗಿನ ಸಣ್ಣ ಕುಟುಂಬ ವ್ಯವಸ್ಥೆಯಲ್ಲಿ ತಾಯಿಯಾಗಿ, ಪತ್ನಿಯಾಗಿ ಕುಟುಂಬಕ್ಕೆ ತಾನೆಷ್ಟು ಸಮಯ ಮೀಸಲಿಡುತ್ತಿದ್ದೇನೆ ಎಂಬ ಚಿಂತೆಯೇ ಸ್ತ್ರೀಯನ್ನು ಆತಂಕಕ್ಕೆ ದೂಡುತ್ತಿದೆ ಎಂದರೆ ತಪ್ಪಾಗಲಾರದು.ಇದರಿಂದಾಗಿ ಅನೇಕ ಸಂಸಾರಗಳು ಒಡೆದು ನುಚ್ಚುನೂರಾದ ಘಟನೆಗಳೂ ಇವೆ. ಮಕ್ಕಳಿಗೆ ಶಿಕ್ಷಣ, ಆರ್ಥಿಕ ಸಬಲತೆ ನೀಡುವತ್ತ ಹೆಣ್ಣುಮಕ್ಕಳು ಗಂಡಸಿನಷ್ಟೇ ಜವಾಬ್ದಾರಿಯಿಂದ ಮನೆಯ ಒಳಹೊರಗೆ ದುಡಿಯುತ್ತಿದ್ದಾರೆ . ತೂಗುವ ಕತ್ತಿಯ ಅಲಗಿನ ಕೆಳಗಿನ ಬದುಕು ನಡೆಸುತ್ತಾ ತನ್ನವರ ಆರ್ಥಿಕ ಸಾಂಸಾರಿಕ ಏಳಿಗೆಗಾಗಿ ದುಡಿಯುವ ಮಹಿಳೆಯ ಆತಂಕಕ್ಕೆ ಸಹಾನುಭೂತಿ ತೋರುವವರು ಬಹಳಷ್ಟು ಜನರಿದ್ದರೂ ಅನುಭವಿಸಿ,ಸಂಭಾಳಿಸಿಕೊಂಡು ಹೋಗುವ ಜವಾಬ್ದಾರಿ ಆಕೆಯದೇ ಆಗಿರುತ್ತದೆ. ಆರ್ಥಿಕ ಸ್ವಾತಂತ್ರ್ಯದ ವಿಚಾರ ಬಂದರೆ, ತಾನು ದುಡಿದದ್ದನ್ನೆಲ್ಲ ಪತಿಯ ಕೈಗೋ, ಅತ್ತೆ-ಮಾವಂದಿರ ಕೈಗೋ ಇಡಬೇಕಾದ ಅನಿವಾರ್ಯ ಪರಿಸ್ಥಿತಿ ಈಗಲೂ ಎಷ್ಟೋ ಕಡೆಗಳಲ್ಲಿ ಚಾಲ್ತಿಯಲ್ಲಿದೆ. ಇಂತಹ ಅನೇಕ ಒತ್ತಡಗಳಿಂದಾಗಿ ಪ್ರತೀ 3 ಉದ್ಯೋಗಸ್ಥ ಮಹಿಳೆಯರಲ್ಲಿ ಇಬ್ಬರು ಜೀವನ ಶೈಲಿ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಉದ್ಯೋಗದ ಅವಧಿಯಲ್ಲಿ ಕುಳಿತಲ್ಲೇ ಕೆಲಸ ಮಾಡುವ ನಮ್ಮ ಸ್ತ್ರೀಯರು ಅನಗತ್ಯವಾಗಿ ಶೇಖರಿಸಿದ ಕೊಲೆಸ್ಟ್ರಾಲ್, ಬೊಜ್ಜು ಇತ್ಯಾದಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ವಿವಿಧ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಮನಸ್ಸಿಗೆ ನೆಮ್ಮದಿ ತಂದುಕೊಳ್ಳುವ ಪ್ರಯತ್ನದಲ್ಲಿ ತಮ್ಮ ದೇಹದ ಕುರಿತು, ಆರೋಗ್ಯದ ಕುರಿತು ಸಂಪೂರ್ಣ ನಿರ್ಲಕ್ಷ್ಯ ಧೋರಣೆ ಹೊಂದಿರುವ ಮಹಿಳೆಯರೇ ಹೆಚ್ಚು. ಅಂಕಿ-ಅಂಶಗಳ ಪ್ರಕಾರ ಶೇಖಡ 83 ರಷ್ಟು ವಿವಾಹಿತ ಉದ್ಯೋಗಸ್ಥ ಮಹಿಳೆಯರಲ್ಲಿ ಶೇಖಡ 36.4ರಷ್ಟು ಮಂದಿ ಸ್ಥೂಲಕಾಯ, ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಮುಂತಾದ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ.

ನಮ್ಮ ಸಮಾಜ ಈಗಲೂ ಹೆಣ್ಣನ್ನು-ಒಬ್ಬ ಒಳ್ಳೆಯ ಸ್ತ್ರೀಯಾಗು ಎಂದೇ ಹೇಳುತ್ತಿದೆ ಹೊರತು ಒಳ್ಳೆಯ ಉದ್ಯೋಗಿಯಾಗು, ಸಮಾಜದಲ್ಲಿ ಕೀರ್ತಿ ಸಂಪಾದಿಸು ಎಂದು ಹೇಳುವ ಮನೋವೈಶಾಲ್ಯವನ್ನು ತೋರುತ್ತಿಲ್ಲ. ಆದರೆ ಆಕೆ ದುಡಿದು ತಂದ ಹಣ ನಮ್ಮ ಕೈ-ಕಿಸೆ ಸೇರಬೇಕು ಇನ್ನು ಮಹಾನುಭಾವರಿಗೆ ಏನೂ ಕೊರತೆಯಿಲ್ಲ. ಉದ್ಯೋಗಂ 'ಪುರುಷ' ಲಕ್ಷಣಂ ಎಂಬ ಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಿರುವ ಸಮಾಜದ ಧಾರ್ಮಿಕ, ಸಾಂಸ್ಕೃತಿಕ ಕಟ್ಟುಪಾಡುಗಳನ್ನು ಮೀರಿ ಬೆಳೆಯುವ ಧೈರ್ಯ ನಮ್ಮ ಸಮಾಜದ ಹೆಣ್ಣು ಮಕ್ಕಳು ಮಾಡುತ್ತಿದ್ದಾರೆ. ಇಷ್ಟೆಲ್ಲದರ ಮಧ್ಯೆ 'ಕಾರ್ಯೇಷು ದಾಸಿ, ಕರಣೇಷು ಮಂತ್ರಿ, ಭೋಜ್ಯೇಶು ಮಾತಾ, ಶಯನೇಶು ರಂಭಾ, ರೂಪೇಶು ಲಕ್ಷ್ಮೀ, ಕ್ಷಮಯಾ ಧರಿತ್ರೀ' ಎಂಬ ಮಾತನ್ನು ಅಚ್ಚುಕಟ್ಟಾಗಿ ಪಾಲಿಸಿಕೊಂಡು ಹೋಗುವ ಅನೇಕ ಸ್ತ್ರೀಯರು ನಮ್ಮ ನಡುವೆ ಇದ್ದಾರೆ.

> **83% ರಷ್ಟು ವಿವಾಹಿತ ಉದ್ಯೋಗಸ್ಥ ಮಹಿಳೆಯರಲ್ಲಿ 36.4%ರಷ್ಟು ಮಂದಿ ಸ್ಥೂಲಕಾಯ, ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಮುಂತಾದ ಕಾಯಿಲೆಗಳಗೆ ಬಲಿಯಾಗುತ್ತಿದ್ದಾರೆ**

ಉದ್ಯೋಗಸ್ಥ ಮಹಿಳೆಯರ ಆತಂಕ ತಕ್ಕಮಟ್ಟಿಗೆ ಶಮನ ಮಾಡುವ ನಿಟ್ಟಿನಲ್ಲಿ ಸಂಸಾರದ ಜವಾಬ್ದಾರಿ ಬಹಳಷ್ಟಿದೆ. ಉದ್ಯೋಗಸ್ಥ ಮಹಿಳೆಯನ್ನು ನೋಡುವ ಚಿತ್ರಣ ಬದಲಾಗಬೇಕು. ಸ್ತ್ರೀ ಶೋಷಣೆ ತಡೆಯುವುದಕ್ಕೆ ಉದ್ಯೋಗ ಸ್ಥಳದಲ್ಲಿ ಕಾನೂನು ಕಟ್ಟಳೆ ಜಾರಿಗೆ ಬರಬೇಕು. ಎಲ್ಲೆಲ್ಲಿ ಅಗತ್ಯವೋ ಅಲ್ಲಲ್ಲಿ ರಜೆಯ ಸೌಲಭ್ಯ, ಸಾಮಾಜಿಕ ಭದ್ರತೆ, ಸಾಂಸಾರಿಕ ಬೆಂಬಲ ಸಿಕ್ಕರೆ ಮಹಿಳೆ ನಿಶ್ಚಿಂತಳಾಗಿ ಉದ್ಯೋಗ-ಸಂಸಾರವನ್ನು ಸಂಭಾಳಿಸಲು ಸಾಧ್ಯ. ಬಹಳ ಮುಖ್ಯವಾಗಿ ಹೆಣ್ಣಿಗೆ ಪ್ರಕೃತಿಯಿಂದ ವರದಾನವಾಗಿ ದೊರಕಿರುವ ತಾಳ್ಮೆ, ಸಹನಾ ಶಕ್ತಿಯ ಸದುಪಯೋಗವಾಗಬೇಕು. ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ ಎಂಬ ಸಂಸ್ಕೃತ ಶ್ಲೋಕದಂತೆ ನಮ್ಮ ನಡುವೆ ಇರುವ ಮಹಿಳೆಯರಿಗೆ ಬೆಂಬಲ, ಸಹಾಯದ ಜೊತೆಗೆ ಗೌರವಯುತ ಸ್ಥಾನಮಾನ ನೀಡಿದರೆ ಸಮಾಜದ ಏಳಿಗೆಗಾಗಿ ಪುರುಷನೊಂದಿಗೆ ಕೈಜೋಡಿಸಿ ಸಮನಾಗಿ ದುಡಿಯುತ್ತಿರುವ ಮಹಿಳೆಯೂ ನೆಮ್ಮದಿಯ ಶಾಂತಿಯ ಜೀವ ನಡೆಸಿಯಾಳು. ಅ

***ಪೃಥ್ವಿ ಕಾರಿಂಜೆ***



# ಮಹಿಳೆಯರು ದಿಟ್ಟತನದಿಂದ ಬದುಕಬೇಕು

*ಮಹಿಳೆಯರು ದಿಟ್ಟತನದಿಂದ ಬದುಕಬೇಕು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 8ರಂದು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಸ್ನೇಹಾ ರಮಾಕಾಂತ್ ಅವರು ಮಹಿಳೆಯರು ಸಮಾಜದಲ್ಲಿ ಪಡುತ್ತಿರುವ ಆತಂಕಗಳ ಕುರಿತು ಬೆಳಕು ಚೆಲ್ಲಿದ್ದಾರೆ.*

ಮನೆ ಮನೆಯಲಿ ದೀಪ ಬೆಳಗಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವೆ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಎಂದರೆ ಅಷ್ಟೆ ಸಾಕೆ

ರಾಷ್ಟ್ರ ಕವಿಗಳು ಅಮೋಘವಾಗಿ ಬರೆದು ಸ್ತ್ರೀ ಕುಲಕ್ಕೆ ತಮ್ಮ ನಮನಗಳನ್ನು ಸಲ್ಲಿಸಿದರು.

ಸ್ತ್ರೀ ಕೇಳಲೇ ಬೇಕಾದ ಒಂದು ಮೋಹಕ ಶಬ್ದ. ಸೃಷ್ಟಿಯ ಅನನ್ಯ ಕೊಡುಗೆ. ತಾಯಿಯಾಗಿ ಅಕ್ಕತಂಗಿಯಾಗಿ ಮಡದಿಯಾಗಿ ಸಖಿಯಾಗಿ ಮಗಳಾಗಿ ಪರಿಪೂರ್ಣತೆಯ ಹೊನಲು. ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಅಂತ ವಜ್ರಕ್ಕಿಂತ ಕಠಿಣಳಾಗಬಳ್ಳಲು ಹೂವಿಗಿಂತ ಕೋಮಲಳಾಗಬಳ್ಳಲು.

ರಾಮಾಯಣದಲ್ಲಿ ಇದಕ್ಕೆ ಒಂದು ಸಣ್ಣ ನಿದರ್ಶನವಿದೆ. ಸೀತಾ ಮಾತೆಯೂ ಸಖಿಯರೊಂದಿಗೆ ಚೆಂಡಾಟವಾಡುತ್ತಿದ್ದಾಗ ಚೆಂಡು ಹಾರಿ ಶಿವಧನುಸ್ಸಿರುವ ಪೆಟ್ಟಿಗೆ ಹಿಂದೆ ಬೀಳುತ್ತದೆ. ಸೀತಾಮಾತೆಯು ಸರಾಗವಾಗಿ ಆ ಪೆಟ್ಟಿಗೆಯನ್ನು ಸರಿಸಿ ಆ ಚೆಂಡನ್ನು ಎತ್ತಿಕೊಂಡು ಆಡಲು ಹೋಗುತ್ತಾಳೆ. ಇದನ್ನು ಕಂಡ ಜನಕಮಹಾರಾಜನು ಆಶ್ಚರ್ಯ ಚಕಿತನಾಗುತ್ತಾನೆ ಮತ್ತೆ ಈ ಶಿವಧನಸನ್ನ ಮುರಿಯುವನೆ ಅವಳಿಗೆ ತಕ್ಕ ವರ ಎಂದು ನಿಶ್ಚಯಿಸುತ್ತಾನೆ. ಇದೇ ಸೀತಾದೇವಿ ಮದುವೆಯಲ್ಲಿ ಉರುಟಣೆ ಆಡಬೇಕಾದರೆ ಶ್ರೀರಾಮ ಎಸೆಯುವ ಮಲ್ಲಿಗೆ ಚೆಂಡನ್ನ ಎತ್ತಲ್ಲಾರದಷ್ಟು ಕೋಮಲೆಯಾಗಿರುತ್ತಾಳೆ. ರಾಮನೇ ಆ ಸಂದರ್ಭದಲ್ಲಿ ಆ ಶಿವಧನಸನ್ನು ಸರಿಸಿದವಳು ನೀನೇನಾ ಎಂದು ಛೇಡಿಸುತ್ತಾನಂತೆ. ಹೀಗೆ ಪರಿಸ್ಥಿತಿ ಗೆ ಹೊಂದುಕೊಳ್ಳುವ ಹೆಣ್ಣನ್ನು ಭೂತಾಯಿಗೆ ಹೋಲಿಸುತ್ತಾರೆ. ಕ್ಷಮಯಾ ಧರಿತ್ರಿ ಸಹನೆಯ ಪ್ರತಿರೂಪ ಎಂದು ಕರೆದು ಹೆಣ್ಣನ್ನು ಸನ್ಮಾನಿಸಿದರೂ ಎಲ್ಲೋ ಅವಳ ಬೆಳವಣಿಗೆಗೆ ವ್ಯತಿರುಕ್ತವಾಗಿಯೆ ಹರಿದು ಬಂದಿದೆ.

ಯತ್ರ ನಾರ್ಯಸ್ತು ಪೂಜ್ಯಂತ ರಮಂತೆ ತತ್ರ ದೇವತಾ: ಎಂಬ ನುಡಿಯನ್ನು ನಂಬಿದ ನಮ್ಮ ಸುಸಂಸ್ಕೃತ ದೇಶದಲ್ಲಿ ಇಂದು ಹೆಣ್ಣಿಗೆ ರಕ್ಷಣೆ ಇಲ್ಲದೆ ಇರುವುದು ವಿಪರ್ಯಾಸದ ಸಂಗತಿ ಹೌದು. ಅತ್ಯಾಚಾರ ಅವಮಾನ ತುಳಿಯುವಿಕೆ ಕಟ್ಟಿಟ್ಟ ಬುತ್ತಿ. ಎಂದು ಒಂದು ಹೆಣ್ಣು ರಾತ್ರಿ ಹನ್ನೆರಡು ಗಂಟೆಯಲ್ಲಿ ಒಬ್ಬಳೆ ನಿರ್ಭಯವಾಗಿ ಓಡಾಡುತ್ತಾಳೋ ಅಂದೇ ಈ ದೇಶಕ್ಕೆ ಸ್ವಾತಂತ್ರ ಸಿಕ್ಕ ಹಾಗೆ ಎಂದಿದ್ದರು ಗಾಂಧೀಜಿ. ಯಾಕೋ ರಾತ್ರಿ ಹನ್ನೆರಡು ಗಂಟೆಯಿರಲಿ ಹಗಲು ಹನ್ನೆರಡು ಗಂಟೆಯಲ್ಲೂ ಧೈರ್ಯವಾಗಿ ಓಡಾಡಲಾಗದ ಕಾಲ ಬರದೆ ಇದ್ದರೆ ಸಾಕು ಎಂದು ಪ್ರಾರ್ಥಿಸುವ ನಿಟ್ಟಿನಲ್ಲಿ ಸಾಗುತ್ತಿದ್ದೇವೆ. ಇಂಥ ಸಂಧರ್ಭದಲ್ಲಿ ಹೆಣ್ಣೂ ತನ್ನ ಸ್ವಯಂ ರಕ್ಷಣೆ ತಾನೆ ಮಾಡಿಕೊಳ್ಳಬೇಕಾಗಿದೆ. ಪರಾವಲಂಬಿಯಾಗದೆ ತನ್ನನ್ನು ಸಮಾಜವನ್ನು ರಕ್ಷಿಸುವ ಛಾತಿ ಮನೋಸ್ಥೈರ್ಯ ಅವಳಲ್ಲಿ ತುಂಬಿದೆ. ಕೇವಲ ದಿಟ್ಟ ಹೆಜ್ಜೆಯ ಮುನ್ನಡೆ ಅವಶ್ಯಕವಿದೆ. ಕೀಚಕರು ದುಶ್ಯಾಸನರು ತುಂಬಿರುವ ಸಮಾಜದಲ್ಲಿ ದಿಟ್ಟವಾಗಿ ಎದುರಿಸಿ ತಲೆ ಎತ್ತಿ ಬಾಳುವ ಸ್ಥೈರ್ಯ ಎಲ್ಲಾ ಹೆಣ್ಣು ಮಕ್ಕಳಿಗೆ ಬರಲಿ. ಅ

***ಸ್ನೇಹಾ ರಮಾಕಾಂತ್***


## ಏಳು ದ್ರೌಪದಿ

ಏಳು ದ್ರೌಪದಿ ಮನವನ್ನು ಎಚ್ಚರಗೊಳಿಸು
ನಿನ್ನ ವಸ್ತ್ರವನ್ನು ಕೈಗಳಿಂದ ನೀನೆ ಸಂಬಾಳಿಸು

ಕೈಗಳಿಗೆ ಹಚ್ಚಿರುವ ಮದರಂಗಿಯ ನೆನಯಬೇಡ
ನಿನ್ನ ಭುಜವನ್ನು ಗಟ್ಟಿಯಾಗಿ ಹಿಡಿ ಮರೆಯಬೇಡ
ನಿನ್ನ ಸೆರಗನ್ನು ರಕ್ಷಿಸಿಕೊ ಯಾರಿಗು ಕಾಯಬೇಡ
ಶಕುನಿಯ ಮೋಸದಾಟಕ್ಕೆ ಹೆದರಿ ಹಿಂಜರಿಯಬೇಡ
ಯಾರಿಂದಲು ಸಾಂತ್ವನದ ಔದಾರ್ಯವ ಅಪೇಕ್ಷಿಸಬೇಡ
ದುಶ್ಶಾಸನನಿರುವ ಸಭೆಯಲ್ಲಿ ನ್ಯಾಯಕ್ಕೆ ಹಂಬಲಿಸಬೇಡ
ಮಾನವಿಲ್ಲದವರು ಮಾನವನ್ನು ಕಾಪಾಡುವರೆಂದು ನಂಬಬೇಡ
ನಿನ್ನ ಕಣ್ಣೀರಿಗೆ ಕರಗಲಿಲ್ಲವೆಂದು ಕಂಗೆಟ್ಟು ನೋಡಬೇಡ

ಏಳು ದ್ರೌಪದಿ ಮನವನ್ನು ಎಚ್ಚರಗೊಳಿಸು
ನಿನ್ನ ವಸ್ತ್ರವನ್ನು ಕೈಗಳಿಂದ ನೀನೆ ಸಂಬಾಳಿಸು

***ಸ್ನೇಹಾ ರಮಾಕಾಂತ್***




## ಸ್ತ್ರೀ

ಜೀವವನ್ನು ಕೊಟ್ಟವಳು ಮಡದಿಯಾಗಿ ನಲಿದವಳು
ತಾಯಿಯಾಗಿ ಸಲಹಿದವಳು ಗೆಳತಿಯಾಗಿ ಬಂದವಳು
ಅಕ್ಕತಂಗಿಯಾಗಿ ಮಮಕಾರದ ಹೊನಲ ಹರಿಸಿದವಳು

ಅವಳ ಹೊಗಳಲು ಧೈರ್ಯವೆಂದೂ ತೋರುವುದಿಲ್ಲ
ಅವಳ ಕಷ್ಟಗಳಿಗೆ ಎಂದು ಸ್ಪಂದಿಸುವ ಮನವಿರುವುದಿಲ್ಲ
ಅವಳ ಕಣ್ಣೀರು ಗಾಳಿಯಲ್ಲಿ ತೇಲಿ ಎಂದೂ ಕಾಣುವುದಿಲ್ಲ

ಅಡಿಗೆ ಮಾಡಿ ಉಣಬಡಿಸಿ ಹಸಿವೆಯನ್ನು ನೀಗಿಸುತ್ತಾಳೆ
ಮನೆಯನ್ನು ಸ್ವಚ್ಛವಿರಿಸಿ ಅಂದದಿ ಸಿಂಗರಿಸಿ ಹರ್ಷಿಸುತ್ತಾಳೆ
ತನ್ನ ಸರ್ವಸ್ವವನ್ನು ಒಪ್ಪಿಸಿ ತನ್ನತನವನ್ನೆ ತೊರೆಯುತ್ತಾಳೆ

ನಕ್ಕು ನಲಿದು ಕಷ್ಟಗಳನ್ನು ನೀಗಿಸಿ ತನ್ನ ದು:ಖ ಮುಚ್ಚಿಡುತ್ತಾಳೆ
ತನ್ನ ಕಣ್ಣೀರನ್ನು ಲೆಕ್ಕಿಸದೆ ಮನೆಯವರ ಕಣ್ಣೀರನ್ನು ಒರೆಸುತ್ತಾಳೆ
ಹಸಿವಿನಿಂದ ಬಳಲಿದ್ದರು ಮನೆಯವರ ಹಸಿವನ್ನು ನೀಗಿಸಿ ತೃಪ್ತಳಾಗುತ್ತಾಳೆ

ಇಂಥವಳಿಗೆ ನೀಡುವದಾದರು ಏನು ನಾವು ಮಾಡುವುದಾದರು ಏನು

ಸದಾ ದೂಷಿಸಿ ವಿಷಯಕ್ಕೆ ಬಣ್ಣಗಳನ್ನು ಲೇಪಿಸಿ ರಾಡಿ ಮಾಡುತ್ತೇವೆ
ಸಂಕಟವನ್ನು ನೋವುಗಳನ್ನು ನೀಡಿ ಅವಳನ್ನು ಖಿನ್ನತೆಗೆ ದೂಡುತ್ತೇವೆ
ಅವಳನ್ನು ಹಿಂದಕ್ಕೆ ತಳ್ಳಿ ಅವಳ ಸಲಹೆ ಬೇಡವೆಂದು ಧಿಕ್ಕರಿಸುತ್ತೇವೆ

ಒಮ್ಮೆಯೂ ಯೋಚಿಸದೆ ನೀನು ಏನು ಅಲ್ಲವೆ ಅಲ್ಲಾ ಎಂದು ಸಾರುತ್ತೇವೆ
ಅತ್ಯಾಚಾರವೆಸಗಿ ಹಿಂಸಿಸಿ ಕಡೆಗೆ ಕೊಂದು ಸುಟ್ಟುಹಾಕಿ ಅವಮಾನಿಸುತ್ತೇವೆ
ಕೇವಲ ಭೋಗಕ್ಕೆ ಇರುವಳೆಂದು ಗಹಗಹಿಸಿ ಅವಳ ಮನವನ್ನು ಹಿಂಡುತ್ತೇವೆ

ಕೀಳು ಮನಸ್ಥಿತಿಯವರಿಗೆ ಅವಳೇನೆ ಇರಬಹುದು ಅಸಹ್ಯದ ಶಬ್ದಗಳಿಂದ ತುಂಬಿರುವ ಗಣಿ
ನನಗೆ ಎಂದೆಂದಿಗೂ ಅವಳು ಚತುರೆ ಮಮಕಾರಿಣಿ ಸೌಂದರ್ಯದ ಸ್ವಾಭಿಮಾನದ ಖನಿ
ಎಂದೆಂದಿಗು ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ: ಅವಳು ಸ್ತ್ರೀ
ಕೇವಲ ಸ್ತ್ರೀ

***ಸ್ನೇಹಾ ರಮಾಕಾಂತ್***

# ಅನುಭವದ ಅರಿವು

ಒಂದು ದಶಕದ ಹಿಂದೆ ನನ್ನನ್ನು ನನ್ನ ಸ್ನೇಹಿತರೊಬ್ಬರು ಈಗ ನೀವು ಕೆಲಸದಿಂದ ನಿವೃತ್ತರಾಗಿದ್ದೀರಿ. ಹೇಗೆ ಕಾಲ ಕಳೆಯುತ್ತೀರಿ" ಎಂದು ಸಹಜವಾಗಿ ಕೇಳಿದರು. ಮತ್ತೊಬ್ಬರು ನನ್ನ ವಯಸ್ಸನ್ನು ಕೇಳಿ ನಿಮಗೆ ವಯಸ್ಸಾಗುತ್ತಿದ್ದಂತೆ ನಿಮಗೆ ಏನನ್ನಿಸುತ್ತೆ?" ಎಂದು ಪ್ರಶ್ನಿಸಿದರು. ಎರಡೂ ಕಷ್ಟದ ಪ್ರಶ್ನೆಗಳೆನಿಸಿತು ನನಗೆ. ನಿವೃತ್ತಿ ಎಂದರೇನು? ವೃತ್ತಿ ಎಂದರೇನು? ಕಿಶೋರಿ-ಯುವತಿ-ಪ್ರೌಢೆ-ವೃದ್ಧೆ ಇವೆಲ್ಲಾ ಶಬ್ದಗಳ ಅರ್ಥವೇನು? ಇದು ಕೇವಲ ಆ-ಆ ಸಮಯಕ್ಕೆ ಸೀಮಿತವೇ; ಬಾಹ್ಯರೂಪವೇ. ಮನಸ್ಸು ಮತ್ತು ಶರೀರದ ವಯಸ್ಸುಗಳು ಬೇರೆ ಬೇರೆಯೇ ಅಥವಾ ಒಂದು ಸ್ಥಿತಿಯೇ? ಅಂದರೆ ಶರೀರಕ್ಕೆ ವಯಸ್ಸಾದಂತೆ ಮನಸ್ಸು ಪಕ್ವವಾಗಿ ಕಳಚಿ ಬೀಳುವಂತಾಗುತ್ತದೆಯೇ? ಶಾರೀರಕ ಶಿಥಿಲತೆಯೊಡನೆ ಬಲಹೀನತೆಯೇ ಎಂದು ನಾನಾ ಯೋಚನೆಗಳು ಬಂದು ಒಂದು ತರಹ ಗೊಂದಲವಾಗಿ ಬಿಟ್ಟಿತು ನನಗೆ.

ನಾನು ಅನುಭವಸ್ಥಳು ಎಂಬ ಭಾವನೆ ಹೆಮ್ಮೆಯೋ ಅಥವಾ ಅರಿವು ಮೂಡಿದೆ ಎಂಬ ಸಮಾಧಾನವೇ ಎಂಬುದಕ್ಕೆ ಇಂದಿನವರೆಗೂ ಉತ್ತರ ನನ್ನಲ್ಲಿ ನನಗೆ ಸಿಕ್ಕಿಲ್ಲಾ. ನಾನು ದಿನವೂ ಒಂದಲ್ಲ ಒಂದು ತಪ್ಪು ಮಾಡುತ್ತೇನೆ. ಅದನ್ನು ಸರಿಪಡಿಸಿಕೊಳ್ಳಲು ಪುನಃ ಪುನಃ ಪ್ರಯತ್ನಪಟ್ಟು ಕಲಿತುಕೊಳ್ಳುತ್ತೇನೆ ಎಂದುಕೊಂಡರೆ ನಾನು ವಯಸ್ಸಾದಂತೆಲ್ಲಾ ಕಲಿತುಕೊಳ್ಳುತ್ತಾ ಇದ್ದೇನೆ. ಅಂದರೆ ನನ್ನ ಕಲಿಕೆಗೆ ಅಂತ್ಯವಿಲ್ಲ ಎಂಬುದೇ ಸರಿ ಉತ್ತರ ಎನ್ನಿಸುತ್ತದೆ. ನಮಗೆ ಜೀವನದಲ್ಲಿ ಹಕ್ಕಿಗಿಂತ ಹೊಣೆಗಾರಿಕೆಯ ಅರಿವು ಅರ್ಥವಾಗಬೇಕು. ಯಾವುದೇ ಕೆಲಸವಾಗಲೀ ಅನುಕೂಲ-ಅನಾನುಕೂಲ ಪರಿಸರದಲ್ಲಿ ಒಂದು ಸೀಮಿತದಲ್ಲಿ ಸಾರ್ಥಕವಾಗಲು ಪ್ರಯತ್ನಿಸಬೇಕು. ಕೆಲವನ್ನು ಬಲ್ಲವರಿಂದ ಕಲಿತು, ಕೆಲವನ್ನು ನೋಡಿ ಕಲಿತುಕೊಂಡು, ಕೆಲವನ್ನು ಮಾಡಿ-ನೋಡಿ ಕಲಿತುಕೊಂಡು ಜ್ಞಾನ ಎಂಬ ಪರಿಕಲ್ಪನೆಯ ಅರಿವನ್ನು ಅರ್ಥೈಸಿಕೊಳ್ಳಬೇಕು. ಇದನ್ನೆಲ್ಲಾ ಕಾರ್ಯಗತಗೊಳಿಸಲು ಸಾಕಷ್ಟು ಮನೋಸ್ಥೈರ್ಯ, ಸಂಕಲ್ಪ ಸ್ವಾತಂತ್ರ್ಯವಿರಬೇಕು.

ಇಲ್ಲಿ ಸ್ವಾತಂತ್ರ್ಯದ ಬಗ್ಗೆ ಯೋಚಿಸಿದರೆ ಈ ಶಬ್ದ ಒಂದು ಅಮೂರ್ತ ಪರಿಕಲ್ಪನೆ. ಈ ಪದ ಎಲ್ಲಿ ಹೇಗೆ ಅನ್ವಯಿಸುತ್ತದೆ; ಹೇಗೆ ಸ್ವಾತಂತ್ರ್ಯವನ್ನು ಉಪಯೋಗಿಸಬೇಕು? ಯಾವ ಸ್ಥಿತಿಗೆ ಸ್ವಾತಂತ್ರವೆನ್ನಬೇಕು? ಸ್ವ-ಎಂದರೆ ತನ್ನದೇ; ತಂತ್ರ ಎಂದರೆ-ಟೆಕ್ನಿಕ್ ಎಂದೇ? ಇಂಡಿಪೆಂಡೆನ್ಸ್, ಫ್ರೀಡಮ್, ಲಿಬರ್ಟಿ ಎಂದೇ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ಸಾಧನವೆಂದೇ; ಅಡ್ಡಿ ಅಡಚಣೆಗಳಿಲ್ಲದ ಪರಿಸ್ಥಿತಿಯೇ? ಪರಾವಲಂಬಿಯಲ್ಲ ಎನ್ನುವ ಅರ್ಥವೇ? ಹೊರಕಟ್ಟುಗಳನ್ನು ಕಳಚಿಕೊಂಡು ವರ್ತಿಸುವುದು ಸ್ವತಂತ್ರವೇ ಅಥವಾ ಸ್ವೇಚ್ಛಾಚಾರವೇ ಎಂಬ ನಾನಾ ಅರ್ಥಗಳು ಮನಸ್ಸಿಗೆ ಹೊಳೆಯುತವೆ. ಈ ಮೇಲೆ ಹೇಳಿದ ಎಲ್ಲಾ ಸಂದರ್ಭೋಚಿತ ಶಬ್ದಗಳನ್ನು ಒಂದು ಒಳಕಟ್ಟು ಜಗಿದು ಹಿಡಿದಿಡಬೇಕು. ಅದೇ ನಿಯಂತ್ರಣ ಅಥವಾ ತಿಳುವಳಿಕೆ ಎನ್ನಬಹುದು. ಸ್ವಾತಂತ್ರ್ಯದ ಎರಡು ಮುಖಗಳು ಹಕ್ಕು ಮತ್ತು ಕರ್ತವ್ಯ. ಹಕ್ಕಿಗಿಂತ ಹೊಣೆಗಾರಿಕೆಯ ಅರಿವು ಬಹಳ ಅವಶ್ಯಕ. ಹೊಣೆಗಾರಿಕೆಯು ತನ್ನ ಪರಿಸರಕ್ಕೆ ಸಂಬಂಧಪಟ್ಟು ಸಮಾಜದ ಕಟ್ಟುನಿಟ್ಟುಗಳ ಚೌಕಟ್ಟಿನಲ್ಲಿರುವ ಕಾರಣ ಕಾಲ ಕಾಲಕ್ಕೂ ಒಳಿತನ್ನು ಯೋಚಿಸಿ ಅದಕ್ಕೆ ಒಂದು ರೂಪ ಕೊಡುವುದು ಮಾನವೀಯತೆ ಹಿರಿದಾದ ಕೊಡುಗೆ. ಅಲ್ಲದೆ ಕರ್ತವ್ಯ ಕೂಡ. ಯಾವುದೇ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ಕಟ್ಟಿ ನಿರ್ಮಿಸಿರುವ ಮಹನೀಯರನ್ನು ನಾವು ಗೌರವಾದರದಿಂದ ಜ್ಞಾಪಿಸಿಕೊಂಡು, ಅವರ ಇತಿಹಾಸದ ಬಗ್ಗೆ ಗಹನವಾಗಿ ಯೋಚಿಸಿ ಅವರುಗಳು ಎದುರಿಸಬೇಕಾಗಿದ್ದ ಕಷ್ಟನಷ್ಟಗಳನ್ನು ಅರಿತುಕೊಂಡು ಆ ಸಂಘ ಸಂಸ್ಥೆಗಳನ್ನು ಉಳಿಸಿಕೊಂಡು ಉತ್ತಮ ಮಟ್ಟಕ್ಕೇರಿಸುವ ಪ್ರಯತ್ನದ ಮೂಲಕ ಅವರುಗಳಿಗೆ ಕೃತಜ್ಞತೆ ಸಲ್ಲಿಸಬೇಕು. ಇದು ಕೇವಲ ಒಂದು ಸೀಮಿತ ಸಮಯದಲ್ಲಿ ಕಲಿತು ಮಾಡುವ ಕೆಲಸವಲ್ಲ. ಇದರಲ್ಲಿ ಭೂತ-ವರ್ತಮಾನ-ಭವಿಷ್ಯದ ಕೊಂಡಿಗಳಿವೆ. ಈ ಕೊಂಡಿಗಳು ತುಕ್ಕು ಹಿಡಿಯದಂತೆ ಕಾಲಕ್ಕೆ ತಕ್ಕಂತೆ ಸೂಕ್ತವಾಗಿ ಯೋಚಿಸಿ ಒಂದಕ್ಕೊಂದು ಹೊಂದಾಣಿಕೆ ನೋಡಿಕೊಳ್ಳಬೇಕು.

ಹಳತಾದದ್ದೆಲ್ಲಾ ಕಳಪೆಯಲ್ಲ; ಹೊಸತೆಲ್ಲಾ ಅವಿವೇಕದ ಫಲವಲ್ಲ ಎಂಬ ಭಾವನೆಯಿಂದ ಕರ್ತವ್ಯ ನಿರ್ವಹಿಸಬೇಕು. ಪ್ರತಿಯೊಂದು ಹಳೆಯ ಮರವೂ ಬೀಳುವ ಮುಂಚೆ ಬೀಜ ಬಿತ್ತಿ ಹೋಗುತ್ತೆ. ಈ ಸೃಷ್ಟಿಯೇ ಹಾಗೆ. ಇದು ನನಗೆ ವಯಸ್ಸಾದಂತೆ ಆದ ಅನುಭವವೆನ್ನಬೇಕು. ಅನುಭವ ಪರಂಪರೆಗಳು ಹೆಚ್ಚು ಪ್ರಗತಿಪರ ಧೋರಣೆಗೆ ಅವಕಾಶ ಮಾಡಿಕೊಡಬೇಕು. ಬರುವಾಗ ಬರಿ ಕೈಲಿ ಬಂದರೂ ಹೋಗುವಾಗ ಎರಡು ಕೈಗಳಿಂದಲೂ ಕೊಟ್ಟು ಹೋಗಬೇಕು ಎಂಬ ನಾಣ್ನುಡಿ ಕರ್ತವ್ಯದ ಬಗ್ಗೆ ಅರಿವು ಮೂಡಿಸುತ್ತದೆ. ಸ್ವತಂತ್ರ ಸ್ವೇಚ್ಛಾಚಾರವಾಗದೇ ಸರಿ ತಪ್ಪುಗಳ ಭೇದವನ್ನು, ನಡುವಿನಲ್ಲಿ ಅನುಕೂಲವೇ ಪ್ರಾಧಾನ್ಯವಾಗದೇ ಮಾನವೀಯತೆ, ಮನಃಶಾಂತಿ, ಸಂತೋಷ, ಆತ್ಮತೃಪ್ತಿಗೆ ಬೇಕಾದ ಆತ್ಮೀಯತೆಯನ್ನು ಸಂಪಾದಿಸಿಕೊಳ್ಳಲು ಉಪಯೋಗಿಸಬೇಕು.

ಸಾಮಾಜಿಕ ಕಟ್ಟುನಿಟ್ಟು, ಕಟ್ಟಳೆ, ಸಂಪ್ರದಾಯ, ಸಂಸ್ಕಾರ, ಧಾರ್ಮಿಕ ಮನೋವೃತ್ತಿ, ಆಚಾರ, ವ್ಯವಹಾರ ಇವೆಲ್ಲವೂ ಪರಿಸರದ ಅಂಗಾಂಗಗಳಾದರೆ ಅದನ್ನು ಹಿತಕರ ದೃಷ್ಟಿಯಲ್ಲಿ ವೀಕ್ಷಿಸಿ ಅರಿತುಕೊಂಡು ಕರ್ತವ್ಯ ನಿರ್ವಹಿಸಬೇಕು. ನಮ್ಮ ದೇಶದ ವೇದೋಪನಿಷತ್ತುಗಳು, ಪುರಾಣಗಳು, ಮಹಾಕಾವ್ಯಗಳು, ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಇನ್ನೊಬ್ಬರ ಒಳಿತಿಗಾಗಿ ಮಾಡುವ ತ್ಯಾಗವನ್ನು ಶ್ವಾಸೋಚ್ಛ್ವಾಸದಂತೆ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅಲ್ಲದೆ ಆ ಮಾರ್ಗದಲ್ಲಿ ನಡೆಯುವ ರೀತಿ ನೀತಿಯನ್ನು ಬೋಧಿಸುತ್ತದೆ. ಇದನ್ನು ಅಳವಡಿಸಕೊಂಡು ಕೆಲಸ ಮಾಡಿದಲ್ಲಿ ಪ್ರತಿಯೊಬ್ಬರ ಕುಟುಂಬ, ಸಮಾಜ, ನಾಡು, ದೇಶ ವಿಶ್ವದಲ್ಲಿ ಒಂದು ಮಾದರಿಯಾಗಬಹುದು.

ನಾವು ಹಕ್ಕಿಗಿಂತ, ಪ್ರೀತಿ, ಸರಳತೆ, ತ್ಯಾಗ ಹಾಗೂ ಹೊಣೆಗಾರಿಕೆಗೆ ಆದ್ಯತೆ ನೀಡಬಲ್ಲ ಅರಿವನ್ನು ಪಡೆಯಬೇಕು. ಪ್ರಾಯಶಃ ಈ ಭಾವನೆ, ಈ ಅರಿವು ನಮ್ಮ ಮುಂದಿನ ಪೀಳಿಗೆಗೆ ಸಹಾಯವಾಗಿ ಹಳೆಬೇರಿನ ಕಾಂಡದ ಆಧಾರದ ಹೊಸ ಚಿಗುರಿನ ಲವಲವಿಕೆ ವಿಕಸನೆಯಂತೆ ಅವರವರ ಬಾಳಿನ ರೂಪುರೇಷೆಗೆ ಸಾಕಷ್ಟು ಬೆಂಬಲವಾಗಬಹುದು. ಇದು ನಾನು ಬೆಳೆಯುತ್ತಿರುವಂತೆ ಅರಿಯುತ್ತಿರುವುದರ ಅನುಭವ.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಒಂದು ಹಾಸ್ಯ ಗುಟುಕು.

ಪ್ರಶ್ನೆ : ಆಡಮ್ ಈವ್‌ನನ್ನು ಏಕೆ ಸೃಷ್ಟಿಸಿದ?

ಉತ್ತರ : 1. ಆಡಮ್ ತೋಟದಲ್ಲಿ ಎಲ್ಲೋ ಕಳೆದುಹೋಗುತ್ತಿದ್ದ. ಯಾರಾದರೂ ಒಬ್ಬರು ಹುಡುಕಿ ಮನೆಗೆ ಕರೆದುಕೊಂಡು ಬರಬೇಕಾಗಿತ್ತು. ಅದಕ್ಕೇ ಸೃಷ್ಟಿಸಿದ.

2. ಆಡಮ್ ತನ್ನ ವಸ್ತುಗಳನ್ನು ಆಗಾಗ್ಗೆ ಅಲ್ಲಿ ಇಲ್ಲಿ ಇಟ್ಟು ಮರೆಯುತ್ತಿದ್ದ. ಅದರಲ್ಲಿ ಅವರನ ರಿಮೋಟ್ ಸಹಾ ಒಂದು. ಯಾರಾದರೂ ರಿಮೋಟು ಹುಡುಕಿ ಅವನ ಕೈಗೆ ಕೊಡಬೇಕಾಗಿತ್ತು. ಅದಕ್ಕೆ ಈವ್‌ನ್ನು ಸೃಷ್ಟಿಸಿದ.

3. ಆಡಮ್ ಯಾವಾಗಲೂ ಹಳೆ ಅತ್ತಿ ಎಲೆ ಮತ್ತು ಅಂಜೀರದ ಹೊಸದೊಂದು ಎಲೆ ಬೇಕಾಗಿತ್ತು. ಅದಕ್ಕಾಗಿ ಈವ್‌ಳನ್ನು ಸೃಷ್ಟಿಸಿದ.

4. ಆಡಮ್ ವೈದ್ಯ, ದಂತವೈದ್ಯ ಅಥವಾ ಹಜಾಮರನ್ನು ಗೊತ್ತು ಮಾಡಲು ಈವ್ ಬೇಕಾಗಿತ್ತು.

5. ಅವನೆಂದೂ ಕಸ ಹೊಡೆಯುತ್ತಿರಲಿಲ್ಲ. ಅದಕ್ಕೆ ಈವ್‌ಳನ್ನು ಸೃಷ್ಟಿಸಿದ.

6. ಅವನೆಂದೂ ಗರ್ಭಹೊತ್ತು ಹೆರಿಗೆ ನೋವು ಅನುಭವಿಸಲಾಗುತ್ತಿರಲಿಲ್ಲ. ಅದಕ್ಕೆ ಈವ್‌ಳನ್ನು ಸೃಷ್ಟಿಸಿದನಂತೆ. ಅ

***ಡಾ. ಅಹಲ್ಯಾ ಚಿಂತಾಮಣಿ***


**Statement of Ownership and other Particulars about**

**Delhi Karnataka Sangha's ABHIMATA**

**FORM-IV (See Rule 8)**

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 22 |
| **Editor's Name** | : | Balakrishna Naik D |
| **Nationality** | : | Indian |
| **Address** | : | As Above |
| **Name & Address** | : | Delhi Karnataka Sangha of Individual who Rao Tularam Marg, Sector-12 own the News Paper R.K. Puram, New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

**09.03.2015** **Sd\-**

**New Delhi** **Publisher**

# ಅಮ್ಮಾ.. ನೀನೆಲ್ಲಿರುವೆ????

ಕಾಣದ ದೇವರು ನೂರಾರು, ತಾಯಿ ಒಬ್ಬಳೇ ಸದಾ ನಮ್ಮ ಕಣ್ಣ ಮುಂದಿರುವ ದೇವರು. ಅದಕ್ಕೇ ಅಲ್ವೇ ಹಿರಿಯರು ಹೇಳಿರೋದು–ಮಾತೃ ದೇವೋ ಭವಃ ಅಂತ. ಅಮ್ಮಾ–ಎನ್ನುವ ಎರಡಕ್ಷರದ ಹಿರಿಮೆಯನ್ನು ಎಷ್ಟೇ ಬಣ್ಣಿಸಿದರೂ ಕಡಿಮೆ ಅನಿಸುತ್ತೆ. ಪ್ರತಿಯೊಬ್ಬರ ಜೀವನದಲ್ಲಿ, ಅವರ ವರ್ಣನೆಯಲ್ಲಿ ಅನೇಕ ರೀತಿಯಲ್ಲಿ ಅಮ್ಮನನ್ನು ಕಾಣಬಹುದು. ಅವಳ ಬಗ್ಗೆ ಬರೆಯಲು ಅದೆಷ್ಟು ಪುಟಗಳಾದರೂ ಸಾಲದು. ನಿರ್ಮಲ, ನಿಷ್ಕಮಲ ಪ್ರೀತಿಯ ಧಾರೆ ಹರಿಸುವ ಮಮತಾಮಯಿ ಮಾತೆಯ ಪ್ರೀತಿಯನ್ನು ಪಡೆದ ಪ್ರತಿಯೊಬ್ಬ ಕಂದನ ಬಾಳು ಬಂಗಾರದಂತೆ. ಅಕ್ಕರೆಯಿಂದ ಮುದ್ದಾಡಿಸಿ, ಲಾಲಿಸಿ–ಪಾಲಿಸಿ, ಸರಿ ತಪ್ಪನ್ನು ತೋರಿಸಿ, ತಿದ್ದಿ ನಮ್ಮನ್ನು ಮುಂದೆ ತರುವ ತಾಯಿ ಮಮಕಾರದ ಸಾಕಾರ ಮೂರ್ತಿ. ನಾವು ಕಷ್ಟದಲ್ಲಿದ್ದಾಗ ಮಮ್ಮಲ ಮರುಗಿ, ನಮ್ಮ ಯಶಸ್ಸು ಕಂಡು ಹಿರಿಹಿರಿ ಹಿಗ್ಗಿ ಹಾರೈಸುವ ತಾಯಿಗಿಂತ ಮಿಗಿಲಾದ ದೇವರಿನ್ನೆಲ್ಲಿರಲು ಸಾಧ್ಯ ಹೇಳಿ? ಪ್ರಪಂಚದಲ್ಲೇ ಅತ್ಯಂತ ಅಮೂಲ್ಯ ವಸ್ತು ಅಂದರೆ ತಾಯಿಯ ಮೃದು ಹೃದಯ ಮಾತ್ರ. ಹೀಗಾಗಿಯೇ ತಾಯಿಯ ಋಣವನ್ನು ತೀರಿಸೋಕೆ ಸಾಧ್ಯವೇ ಇಲ್ಲ.

ತಂದೆಯ ಬಗ್ಗೆ ಇದ್ದ ಭಯ–ಭಕ್ತಿಯಿಂದಾಗಿ ಮಕ್ಕಳು ಅವರಿಗಿಂತ ಹೆಚ್ಚಾಗಿ ತಾಯಿಯೊಡನೆಯೇ ಸ್ಪಂದಿಸುತ್ತಾರೆ. ಅವರಿಗೆ ಏನೇ ಸಮಸ್ಯೆ ಬಂದರೂ ಮೊದಲು ಹೇಳಿಕೊಳ್ಳುವುದು ತಮ್ಮ ತಾಯಿಯ ಬಳಿಯೇ. ಕಾರಣ, ಹೇಗಾದರೂ ಮಾಡಿ ಆಕೆ ತಮ್ಮ ಸಮಸ್ಯೆಗಳನ್ನು ಪರಿಹರಿಸುತ್ತಾಳೆಂಬ ದೃಢ ನಂಬಿಕೆ. ಆದರೆ ಅದೇ ಅವಳು ಎಂದಾದರೂ ಸಮಸ್ಯೆಯೊಳಗೆ ಸಿಲುಕಿದರೆ ತನ್ನ ಮಕ್ಕಳ ಮುಂದಾಗಲೀ, ಇಲ್ಲ ಪತಿಯ ಮುಂದೆ ತೋರಗೊಡುವುದಿಲ್ಲ. ಮಂದಹಾಸ ಬೀರುತ್ತ, ನೋವನ್ನು ನುಂಗುತ್ತಾ ಕುಟುಂಬದ ಶಾಂತಿಯನ್ನು ಕಾಪಾಡುತ್ತಾಳೆ.

ತಾಯಿಯನ್ನು ಪಡೆದಂತಹ ಭಾಗ್ಯಶಾಲಿ ಮಕ್ಕಳಿಗೆ ಮಾತ್ರ ಗೊತ್ತು ಈ ಮಾತುಗಳ ಅರ್ಥ. ಅದೇ ಅನಾಥಾಲಯದಲ್ಲಿ ಬೆಳೆಯುತ್ತಿದ್ದ ಅಥವ ಬೆಳೆದ ಮಕ್ಕಳಿಗೆ 'ಅಮ್ಮ' ಕೇವಲ ಸಿನೇಮಾದಲ್ಲೋ ಇಲ್ಲ ಕಥೆಯಲ್ಲೋ ನೋಡಿ ತಿಳಿದ ವ್ಯಕ್ತಿ ಮಾತ್ರ ಆಗುವಳು ಅಲ್ಲವೇ? ಮೊನ್ನೆ ಅಮ್ಮ ನನಗೇಂತ ಮಾಡಿಕೊಟ್ಟ ಸ್ವೆಟರನ್ನು ನೋಡ್ತಾ ಇದ್ದೆ. ಉಸಿರಾಟದ ಜೊತೆಗಾತಿಯಾಗಿ ಬಿಟ್ಟಿದೆ ಅವಳ ಸುಂದರ ನೆನಪುಗಳು. ಏನೇ ಹೊಸ ಕೆಲಸ ಮಾಡಿದ್ರೂ ಅವಳಿಗೆ ಫೋನ್ ಮಾಡಿ ತಿಳಿಸದೇ ಇರ್ತಿರಲಿಲ್ಲ. ಅಮ್ಮನ ಸ್ಥಾನವನ್ನು ಯಾರೂ ತುಂಬೋಕೆ ಸಾಧ್ಯವಿಲ್ಲ. ಅಣ್ಣ–ಅಕ್ಕ ಎಷ್ಟೇ ಪ್ರೀತಿ ಮಾಡಿದರೂ ಅವರೊಂದಿಗೆ ಅಮ್ಮನ ಮುಂದೆ ಹಠಮಾಡಿದಂತೆ ಎಲ್ಲಿ ಮಾಡೋಕಾಗುತ್ತೆ ಹೇಳಿ? ಮನದ ತುಮುಲವನ್ನು ಯಾರ ಮುಂದೂ ತೋರಿಸದ ಅಪ್ಪಾಜಿಯವರ ನೋವನ್ನು ನೋಡೋಕೆ ಆಗೋದಿಲ್ಲ. ನಮ್ಮನ್ನು ಸಂತೈಸುತ್ತ, ಸಂಗಾತಿಯನ್ನು ನೆನೆಯುತ್ತಾ ಇರ್ತಾರೆ. ಒಂದೇ ನಾಣ್ಯದ ಎರಡು ಮುಖಗಳಂತಿದ್ದ ಅವರ ಸುಂದರ ಜೋಡಿಗೆ ಯಾರ ದೃಷ್ಟಿ ತಾಗಿತೋ ಗೊತ್ತಿಲ್ಲ. ಯಾರಿಗೂ ಸುಳಿವು ಕೊಡದೇ, ನನ್ನಮ್ಮ ಸೀಗೆ ಹುಣ್ಣಿಮೆಯ ಮುಂಜಾವಿಗೆ ಮುತ್ತೈದೆಯ ವರವನಿತ್ತ ಆ ದೇವರ ಮನೆಯತ್ತ ಪಯಣಿಸಿದ್ದು ಮನೆಯಲ್ಲಿದ್ದವರಿಗೂ ಆಶ್ಚರ್ಯದ ವಿಷಯ. ಈಗಾಗ್ಲೇ ನಾಲ್ಕು ತಿಂಗಳು ಉರುಳಿ ಹೋಗಿವೆ. ಆದರೆ ಮಾಸದ ನೋವು, ಬೀಸುವ ಗಾಳಿಗೆ ಉಲ್ಬಣಿಸುತ್ತಾ ಇರುತ್ತದೆ. ಪ್ರತಿಕ್ಷಣವೂ ಆಕೆಯ ನೆನಪುಗಳು ಕಾಡುತ್ತವೆ. ಆಕೆಯನ್ನು ಕಳೆದುಕೊಂಡಾಗಿನಿಂದ ಜಗವೇ ಶೂನ್ಯವೆನಿಸ್ತಾ ಇದೆ.

ಅವಳ ನೆನಪಲ್ಲೇ ಕುಳಿತವಳಿಗೆ 'ಸಬ್ಜೀ ಲೋ' ಎಂಬ ಕೀರಲು ಸ್ವರ ಕೇಳಿ ಆಶ್ಚರ್ಯವಾಯ್ತು.ನಮ್ಮ ಸೊಸೈಟಿಗೆ ದಿನಾಲೂ ಬೆಳಿಗ್ಗೆ 9 ಗಂಟೆಗೆ 'ಕಾಕೆ' ಎಂಬ ತರಕಾರಿಯವನು ಬರ್ತಾನೆ. ಆದ್ರೆ ಇಂದು ಮಾತ್ರ ಸಂಜೆಗೆ ಯಾಕಪ್ಪಾ ಬಂದ ಅಂತ ಆಶ್ಚರ್ಯವಾಯ್ತು. ಭದ್ರತೆಯ ಕಾರಣದಿಂದಾಗಿ ಎಲ್ಲ ಸೊಸೈಟಿಯ ಹಾಗೆ ನಮ್ಮ ಸೊಸೈಟಿಯಲ್ಲೂ ತರಕಾರಿ ಹಾಗೂ ಕೆಲಸಗಾರರಿಗೆ ಒಳಬರಲು ನಿಗದಿತ ಸಮಯ ಹಾಗೂ ಪಾಸ್ ಕೊಡಲಾಗಿದೆ. ಹಾಗಾಗಿ ಯಾಕಿರಬಹುದೂಂತ ವರಾಂಡಾದಿಂದ ಬಗ್ಗಿ ನೋಡಿದೆ.

ಬೋಳಿಸಿದ ತಲೆ, ಮಾಸಿದ ಬಟ್ಟೆ ಧರಿಸಿ, ನಿರ್ಜೀವ ಸ್ವರದಲ್ಲಿ ಕೂಗುತ್ತಿದ್ದವನನ್ನು ನೋಡಿ ಸುಮ್ಮನಿರಲಾರದೆ ಚಪ್ಪಲಿ ಧರಿಸಿ ಹೊರಟಾಗ ನಮ್ಮ ಮನೇಯವ್ರು ಪ್ರತಿ ಬಾರಿಯಂತೆ– 'ನೀನ್ಯಾಕೆ ಎಲ್ಲರ ಪಂಚಾಯ್ತಿ ಮಾಡ್ತೀಯಾ?' ಅಂತ ಕೇಳ್ತಿದ್ರೂ ಹಿಂದಿರುಗದೆ, ಉತ್ತರಿಸೋ ಗೋಜಿಗೂ ಹೋಗದೇ, ಮೆಟ್ಟಿಲುಗಳನ್ನು ಇಳಿದೆ. 'ಅರೇ ಕಾಕೆ.. ಈವಾಗ್ಯಾಕೆ ಬಂದೆ? ಅಂತ ಕೇಳಿದಾಗ, 'ಏನೂಂತ ಹೇಳಲಿ ಭಾಬೀಜಿ, ನನ್ನಾಕೆ ನನ್ನ ಬಿಟ್ಟು ಹೋಗಿ ಬಿಟ್ಲು' ಅಂತ ಮುಖ ಕೆಳಗೆ ಮಾಡಿದ.

"ಯಾಕೆ ಜಗಳಗಿಗಳ ಮಾಡಿದ್ದೇನು?' ಎಂದೆ. ಆತನ ಅಲೋಕೆ ಶುರುಮಾಡಿದ. ಅವನ ಸ್ಥಿತಿ ಯಾಕೋ ಸರಿಯೆನಿಸಲಿಲ್ಲ. ಮನೆಗೆ ಕರೆದೊಯ್ದು ಕುಡಿಯೋಕೆ ನೀರು ತಿನ್ನೋಕೆ ಚಕ್ಕುಲಿ ಕೊಟ್ಟೆ. ಕೇವಲ ನೀರು ಗುಟುಕಿಸಿದ ಬಳಿಕ 'ಅಲ್ವೋ ಕಾಕೆ, ಆ ಬಸುರಿ ಹುಡುಗಿಗೆ ಹೊಡೆದಿಲ್ಲ ತಾನೆ, ಏನಾಯ್ತು? ಅಂದೆ. ಈ ಜನರಲ್ಲಿ ಇದೆಲ್ಲ ಸರ್ವೇ ಸಾಮನ್ಯ ಅಲ್ವಾ? ಅದಕ್ಕಾತ? "ಛೇ..ಛೇ.. ಇಲ್ಲ ಭಾಬೀಜಿ ನಾನೇನೂ ಮಾಡಿಲ್ಲ, ನಿಮಗೆ ನನ್ನ ಮದ್ವೆ ಹ್ಯಾಗಾಯ್ತು ಅಂತೆಲ್ಲ ಗೊತ್ತಿದೆಯಲ್ವಾ?' ಅಂದ.

ಹೌದು ನೆನಪಾಯ್ತು. ಆರು ವರ್ಷಗಳ ಹಿಂದೆ ಮೀರಠ್ ನಲ್ಲಿರುವ ಅಕ್ಕನ ಪಕ್ಕದ ಮನೆ ಹುಡುಗಿ ಗೀತಾಳನ್ನು ಪ್ರೀತಿಸಿ ಮದುವೆಯಾಗ ಬಯಸಿದ್ದು, ಆದ್ರೆ ಆಕೆಗೆ ದೊಡ್ಡಕ್ಕನಿದ್ದ ಕಾರಣ ಅವಳಪ್ಪ ಅಕ್ಕನನ್ನೇ ಮಾಡಿಕೋ ಅಂತ ಹಠ ಹಿಡಿದಿದ್ದು, ಈತ ಯಾವುದಕ್ಕೂ ಮಣಿಯದೇ ಎರಡು ವರ್ಷಗಳವರೆಗೆ ಗೋಗೆರೆದು ಕೊನೆಗೊಮ್ಮ ಮಾವನ ಮನಗೆದ್ದು, ಅಕ್ಕ–ಭಾವನ ಆಶೀರ್ವಾದ ಪಡೆದು ಗೀತಾಳನ್ನೇ ಮದುವೆಮಾಡಿಕೊಂಡು ದೆಹಲಿಗೆ ಬಂದದ್ದ. 'ಹೌದಪ್ಪಾ.. ನೆನಪಿದೆ. ನೀನು ನಮಗೆಲ್ಲ ಜಂಬದಿಂದ ಲಗ್ನಪತ್ರಿಕೆ ಕೊಟ್ಟು ಹೋಗಿದ್ದನ್ನ ಹ್ಯಾಗೆ ಮರೆಯೋದು? ಅಂತ ಮರುಸವಾಲೆಸೆದೆ.

"ಹೌದು ಭಾಬೀಜೀ., ಆಮೇಲೆ ನನ್ನ ಗೀತಾ ವರ್ಷದೊಳಗೇ ಬೊಂಬೆಯಂತಹ ಹೆಣ್ಣುಮಗು ಖುಷಿಯನ್ನು ನಮ್ಮ ಪ್ರೀತಿಯ ಉಡುಗೊರೆಯಾಗಿ ಕೊಟ್ಟಿದ್ಲು. ಮೊದಲಿನ ಹೆರಿಗೆಯಲ್ಲೂ ಸ್ವಲ್ಪ ತೊಂದ್ರೆ ಅನುಭವಿಸಿದ್ಲು. ಅದಕ್ಕೇ ಎರಡನೆಯ ಬಾರಿ ಬಸಿರಾದಾಗಿನಿಂದ ನಾನು ತುಂಬಾ ಕಾಳಜಿ ವಹಿಸಿದ್ದೆ. ಹೋದ ವಾರ ಜೋರಾಗಿ ಹೊಟ್ಟೆ ನೋವು ಶುರುವಾಯ್ತು. ಡಾಕ್ಟರ್ ಬಳಿ ಕರೆದೊಯ್ದೆ. ಹೆರಿಗೆಗೆ ಇನ್ನೂ ಟೈಮ್ ಇದೆ ಅಂತ ಹೇಳಿ ಮನೆಗೆ ಕಳಿಸಿದ್ರು. ಪುಟ್ಟ ಖುಷಿಯನ್ನ ಒಬ್ಬಳೇ ಮನೇಲಿ ಬಿಟ್ಟು ಬರೋಕೂ ಆಗೋದಿಲ್ಲವಲ್ಲ ಅದಕ್ಕೇ ಸುಮ್ನೆ ಮನೆಗೆ ಕರೆದೊಯ್ದೆ. ಮರುದಿನ ನನ್ನ ದೀದಿ ಬಂದ್ಲು. ಅವಳೂ ಮತ್ತೊಮ್ಮೆ ಡಾಕ್ಟರ್ ಹತ್ರ ಕರೆದೊಯ್ದಾಗ ಎರಡು ದಿನಗಳ ಬಳಿಕ ಬನ್ನಿ ಅಂತ ಹೇಳಿ ಕಳಿಸಿದ್ರು. ಆದ್ರೆ ಅಂದು ರಾತ್ರಿ ಅವಳ ಹೊಟ್ಟೆ ನೋವು ಇನ್ನಷ್ಟು ಜೋರಾದಾಗ ನಾನು ಜೋರು ಮಾಡಿ ಆಸ್ಪತ್ರೆಯಲ್ಲೇ ಭರ್ತಿ ಮಾಡಿದ್ದೆ. ರಾತ್ರಿಯಿಡೀ ನಾವೆಲ್ಲಾ ಅಲ್ಲೇ ಇದ್ವಿ. ಬೆಳಿಗ್ಗೆ ಮುದ್ದಾದ ಗಂಡು ಮಗೂನ ನನ್ನ ಕೈಯಲ್ಲಿಟ್ಟಾಗ ಸ್ವರ್ಗ ಸಿಕ್ಕಂತಾಯ್ತು ನೋಡಿ ಭಾಬೀಜಿ. ಖುಷಿಯಂತೂ ತನ್ನ ತಮ್ಮನ ಕೈಲಾಲು ಮುಟ್ಟಿ ಆನಂದ ಪಡ್ತಿದ್ಲು. ಅಯಾಗೆ ನನ್ನ ಗೀತಾ ಎಲ್ಲಿ" ಅಂತ ಕೇಳಿದಾಗ, 'ಅವಳಿಗೆ ಇನ್ನೂ ಎಚ್ಚರಿಕೆ ಬಂದಿಲ್ಲ.. ಆಮೇಲೆ ಹೋಗಿ ನೋಡಿ' ಅಂದ್ಲು. ಆದ್ರೆ ಆ ಆಮೇಲೆ ಅನ್ನೋದು ಸಂಜೆ ಐದು ಗಂಟೆಯಾದ್ರೂ ಬರಲೇ ಇಲ್ಲ. ಇತ್ತ ಅಕ್ಕನ ಕೈಯಲ್ಲಿ ಹಸಿವೆಯಿಂದ ಅಳುತ್ತಿದ್ದ ನನ್ನ ಎಳೆ ಕಂದನ ಮುಖ ನೋಡಿ ತಾಳಲಾರದೆ ಕೊನೆಗೆ ಅವಳ ಕೋಣೆಯ ಕಡೆಗೆ ಹೋದೆ. ಆದ್ರೆ ಗೀತಾ ಅಲ್ಲಿರಲೇ ಇಲ್ಲ. ಹೊರಗಡೆ ನೋಡಿದಾಗ ಹಾಲಿನ ಮೂಲೆಯಲ್ಲೊಂದು ಸ್ಟ್ರೆಚರ್ ಮೇಲೆ ಮಲಗಿಸಿದ್ದ ಪೇಷಂಟಿನ ಸೀರೆಯನ್ನು ನೋಡಿ ಅದು ಗೀತಾಳದೇ ಅಂತ ಗುರುತಿಸಿ ಅಲ್ಲಿ ಓಡಿ ಹೋದೆ.. ಆದ್ರೆ..

ಆದ್ರೆ ನಾನೆಷ್ಟು ಕರೆದ್ರೂ, ಅಲುಗಾಡಿಸಿದ್ರೂ ಆಕೆ ಮಿಸುಕಾಡಲೇ ಇಲ್ಲ ಭಾಬೀಜೀ. ಆಗ ಆಯಾ ಬಂದು 'ಆಕೆ ನಿನ್ನ ಬಿಟ್ಟು ದೇವ್ರ ಹತ್ರ ಹೋರಟು ಹೋದ್ಲು' ಅಂತ ಹೇಳಿದಾಗ ಸಿಟ್ಟಿಗೆದ್ದು ಸಿಕ್ಕಾಪಟ್ಟೆ ಕೂಗಾಡ್ದೆ, ಚೀರಾಡ್ದೆ, ಡಾಕ್ಟರ್ ಹತ್ರ ಓಡಿ ಹೋದೆ. 'ನೋಡಪ್ಪಾ, ನಾವು ತುಂಬಾ ಪ್ರಯತ್ನ ಪಟ್ವಿ.. ಆದ್ರೆ ದೇವರಿಚ್ಛೆಯ ಮುಂದೆ ನಮ್ಮದೇನೂ ನಡೆಯೋದಿಲ್ಲವಲ್ಲ, ನೀನು ಸಮಾಧಾನ ಮಾಡ್ಕೋ' ಅಂತ ಹೇಳಿ ಕೈಯಾಡಿಸಿಬಿಟ್ರು ಭಾಬೀಜೀ. ನನ್ನ ಮಗ ಹುಟ್ಟಿದ್ದಕ್ಕೆ ಓಣಿಯೊಳಗೆಲ್ಲಾ ಸಿಹಿ ಹಂಚಬೇಕೋ, ಇಲ್ಲ ಹೆಂಡ್ತಿ ಸತ್ತಿದ್ದಕ್ಕೆ ಅಳ್ತಾ ಕೂತ್ಕೋಬೇಕೋ ತಿಳೀಲಿಲ್ಲ.' ಅಂತ ಮತ್ತೆ ಅಳೋಕೆ ಶುರು ಮಾಡ್ದ.

ಪಾಪ.. ಹುಟ್ಟಿದ ಕ್ಷಣದಿಂದಲೇ ತಾಯ ಮುಖ ನೋಡದ ಆ ಕಂದನ ಬಗ್ಗೆ ಅನುಕಂಪ ಮೂಡಿತು. ಪ್ರೀತಿಸಿ ಮದ್ವೆ ಮಾಡಿಕೊಂಡ ಕಾಕೆಯ ಸುಂದರ ಸಂಸಾರ ಧ್ವಂಸವಾಗಿದ್ದು ಕೇಳಿ ಹೃದಯ ಹಿಂಡಿದಂತಾಯ್ತು. 'ಕಾಕೆ ನಿನ್ನ ಪುಟ್ಟ ಖುಷಿಯ ಗತಿಯೇನು? ಎಲ್ಲಿದ್ದಾಳೆ ಅಂತ ಕೇಳಿದಾಗ–'ನನ್ನ ದೀದೀ ಮಗೂನ ತನ್ನ ಜೊತೆಗೆ ಕರೆದೊಯ್ದಾಳಂತೆ, ಖುಷಿಯನ್ನ ಅವಳ ನಾನಿಯ ಮನೆಯಲ್ಲಿ ಬಿಡ್ತೀನೀ. ಮತ್ತೆ ನಾನು ಮೊದಲಿನ ಹಾಗೆ ಈ ರಸ್ತೆ ಮೇಲೆ ತರಕಾರಿ ಮಾರ್ತಾ ನನ್ನ ಜೀವನ ಸಾಗಿಸ್ತೀನಿ' ಅಂದ.

ಹೊಸ ಬಾಳು ಶುರುವಾಗುವ ಮುನ್ನವೇ ಹಾಳಾಗಿ ಹೋದಾತನಿಗೆ ಹ್ಯಾಗೆ ಸಮಾಧಾನ ಹೇಳಬೇಕೋ ತಿಳೀಲಿಲ್ಲ. ಆ ಆಸ್ಪತ್ರೆಯವರ ಮೇಲೆ ಭಾರೀ ಸಿಟ್ಟು ಬಂತು. 'ಮತ್ತೆ ಆಸ್ಪತ್ರೆಯವರು ಅವಳ ಮರಣಕ್ಕೆ ಏನು ಕಾರಣ ಕೊಟ್ರು ? ಅಂದೆ. 'ಭಾಬೀಜೀ, ಅದೇನೂ ಇಷ್ಟುದ್ದ ಹೇಳಿದ್ರು ಅದೂ ಅಲ್ಲದೆ, ನನ್ನ ಪ್ರೀತಿಯ ಗೀತಾ ಹೊರಟು ಹೋದಾಗ ಹ್ಯಾಗಾಯ್ತು, ಏನಾಯ್ತು ಅಂತ ಜಗಳ ಕಾಯ್ದು ಏನು ಮಾಡಲಿ? ಅವ್ರಿಗೇನು, ಕೋರ್ಟು, ಕಚೇರಿ ಅಂತ ಓಡಾಡಿಸ್ತಾರೆ. ಆಗ ದುಡಿದು ತರೋವ್ರ್ಯಾರು? ನನ್ನ ಪುಟ್ಟ ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸೋದು ಬೇಡ್ವೇ' ಅಂತ ಕೇಳಿದಾಗ ಏನು ಉತ್ತರಿಸಬೇಕೆಂದು ತಿಳೀಲಿಲ್ಲ. ಮುಖ ಚಿಕ್ಕದು ಮಾಡಿ, ನನಗೆ ಮಾತಾಡೋಕೆ ಬಿಡದೆ, 'ಬರ್ತೀನಿ' ಅನ್ನುತ್ತ ಇನ್ನಷ್ಟು ನೀರುಕುಡಿದು ಕೆಳಗಿಳಿದು ಹೋದ.

ನನ್ನ ಮನಸು ಇನ್ನಷ್ಟು ಭಾರವಾಯ್ತು.– 'ಅಮ್ಮಾ, ನೀನೆಲ್ಲಿರುವೆ? ಎಂದೆನ್ನುವ ಆತನ ಪುಟ್ಟು ಮಕ್ಕಳಿಗೆ ಆ ದೇವ್ರೇ ಉತ್ತರಿಸಬೇಕು.

'ನೋಡಮ್ಮ, ನಮಗಿಂತಲೂ ಕಷ್ಟದಲ್ಲಿದ್ದವರನ್ನು ನೋಡಿದಾಗ ನಮ್ಮ ಕಷ್ಟ ತುಂಬಾ ಕಮ್ಮಿ ಎನಿಸುತ್ತೆ' ಎಂದೆನ್ನುವ ನನ್ನಮ್ಮನ ಮಾತು ಮತ್ತೆ ನೆನಪಿಗೆ ಬಂತು. ಹೌದಮ್ಮಾ, ನಿನ್ನ ಮಾತು ಖಂಡಿತ ಸತ್ಯ ಅಂದೆ ಮನದಲ್ಲೇ.

ಭಾರವಾದ ಮನದಿಂದ ಆ ದೇವರಲ್ಲಿ ಬೇಡಿಕೊಳ್ಳುವುದು ಇಷ್ಟೇ–'ಅಮ್ಮಾ ನಿನ್ನ ತೋಳಿನಲ್ಲಿ ಕಂದ ನಾನು' ಅಂತ ಮನಃಪೂರ್ತಿ ನಲಿಯುವ ಭಾಗ್ಯ ಎಲ್ಲರಿಗೂ ಸಿಗಲಿ' ಅಂತ. ಅ

**ಸವಿತಾ ಇನಾಮದಾರ್**



## ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿ ಪಿಕ್‌ನಿಕ್

ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿಯಿಂದ ಆಯೋಜಿಸಲಾದ ವಾರ್ಷಿಕ ವನವಿಹಾರವನ್ನು ನೆಹರು ಉದ್ಯಾನವನದಲ್ಲಿ ಫೆಬ್ರವರಿ 15ರಂದು ಹಮ್ಮಿಕೊಳ್ಳಲಾಗಿತ್ತು. ಸುಮಾರು ಹದಿನೈದು ಕನ್ನಡ ಪೋಲಿಸ್ ಕುಟುಂಬಗಳು ದೆಹಲಿಯ ವಿವಿಧ ಭಾಗಗಳಿಂದ ಬಂದು ಉದ್ಯಾನವನದಲ್ಲಿ ಸೇರಿ ಆಟೋಟ ಸ್ಪರ್ಧೆ ಮತ್ತು ವಿವಿಧ ಮನೋರಂಜನೆಗಳಲ್ಲಿ ಭಾಗವಹಿಸಿ ಒಕ್ಕೂಟಕ್ಕೆ ಮೆರುಗುಕೊಟ್ಟರು. ಆನಂತರ ಮಧ್ಯಾಹ್ನದ ಭೋಜನವನ್ನು ಆಯೋಜಿಸಲಾಗಿತ್ತು. ಮುಂದಿನ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ಎಲ್ಲರು ತಮ್ಮ ತಮ್ಮ ಅನಿಸಿಕೆ, ಅಭಿಪ್ರಾಯ ಮತ್ತು ಕಾರ್ಯತಂತ್ರಗಳನ್ನು ಚರ್ಚೆಯ ಮೂಲಕ ಹಂಚಿಕೊಂಡರು. ಮುಂದಿನ ಇನ್ನೊಂದು ಸಭೆಯ ನಿರೀಕ್ಷೆಯೊಂದಿಗೆ ಎಲ್ಲರು ಸಿಹಿ ಅನುಭವದೊಂದಿಗೆ ತಮ್ಮ ತಮ್ಮ ಮನೆಗೆ ತೆರಳಿದರು.

## ಲೇಡೀಸ್ ಅಸೋಸಿಯೇಶನ್ ಪಿಕ್‌ನಿಕ್

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರು ಇತ್ತೀಚೆಗೆ ದೆಹಲಿಯ ಹೌಸ್‌ಕಾಸ್‌ನಲ್ಲಿರುವ ಡೀರ್ ಪಾರ್ಕ್‌ನಲ್ಲಿ ವನವಿಹಾರವನ್ನು ಆಯೋಜಿಸಿದರು. ಲಘು ಉಪಹಾರ ಸವಿಯುತ್ತಾ ಹಾಸ್ಯ, ನಗು, ಹರಟೆ ನಡುವೆ ಕಾಫಿ–ಟೀ ಸೇವಿಸಿದ್ದಾಯ್ತು. ಅಧ್ಯಕ್ಷೆ ಶ್ರೀಮತಿ ರಾಧಾ ಕೌಜಲಗಿಯವರು ಸದಸ್ಯರುಗಳಲ್ಲಿ ಯಾರ್‍ಯಾರ ಹುಟ್ಟುಹಬ್ಬ ವಿವಾಹ ವಾರ್ಷಿಕೋತ್ಸವವಿತ್ತೋ ಅವರಿಗೆ ಸ್ನೇಹಾ ದೆಹಲಿ ಕನ್ನಡ ಅಸೋಸಿಯೇಶನ್ ಪರವಾಗಿ ಶುಭಾಶಯಗಳನು ತಿಳಿಸಿದರು. ಆಟೋಟಗಳು ಇಲ್ಲ ಅಂದ್ರೆ ಮಜವಿಲ್ಲ ಪಿಕ್‌ನಿಕ್‌ನಲ್ಲಿ. ಕಿವಿಗೆ ಬಳೆ ಕಟ್ಟಿದ ದಾರ ನೇತುಹಾಕಿ ಬಳೆಯಿಂದ ನೀರು ತುಂಬಿ ಬಾಟಲಿಯ ಕಂಠಕ್ಕೆ ಹಾಕಿ ಬೀಳಿಸಬೇಕು. ಜಯಾ ಆಚಾರ್ಯ ಇದರ ಬಗ್ಗೆ ತಿಳಿಸಿದಾಗ ಬೀಳಿಸದೆ ಏನು ಇಷ್ಟೇನಾ ಎನಿಸಿತು. ಒಬ್ಬೊಬ್ಬರಾಗಿ ಆಡಲು ಶುರು ಮಾಡಿದಾಗ ಆಟದ ಮೋಜು ಗೊತ್ತಾಗ ತೊಡಗಿತು. ಒಂದು ನಿಮಿಷದಲ್ಲಿ ಬೀಳಿಸದೆ ಏನು ಎನಿಸಿದ ಆಡಲು ತಯಾರಾದಾಗಲೇ ಗೊತ್ತಾಗಿದ್ದು ಅದರ ಗಮ್ಮತ್ತು. ಪಕ್ಕದಲ್ಲಿದ್ದವರಲ್ಲಿ ಬೇಗ ಬೀಳಿಸುತ್ತಾರೋ ಅಂತ ಆತಂಕ, ಗಾಬರಿ, ಆತುರದಿಂದ ಹತ್ತಿರ ಹತ್ತಿರ ತಂದು ಇನ್ನೇನು ಬಾಟಲಿ ಬೀಳಿಸಬೇಕು ಎನ್ನುವಾಗ ತಪ್ಪಿ ಮತ್ತೆ ಪ್ರಯತ್ನಿಸುವ ಎನ್ನುವ ವೇಳೆಗೆ ಸಮಯ ಕೊನೆಗೊಳ್ಳುತ್ತಿತ್ತು. ಪಿಕ್‌ನಿಕ್‌ನಲ್ಲಿ ಎಷ್ಟೋ ವಿಧವಾದ ಆಟಗಳನ್ನು ಆಡಿದರೂ ಕೂಡ ಹೌಸಿ ಹೌಸಿ ಆಡಲಿಲ್ಲ ಅಂದ್ರೆ ಪಿಕ್‌ನಿಕ್‌ಗೆ ಕಳೆ ಬರಲ್ಲ. ಆಟದಲ್ಲಿ ಮುಳುಗಿದ್ದವರಿಗೆ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. ಊಟಕ್ಕೆ ಕರೆ ಬರುವವರೆಗೂ ಎಳೆ ಬಿಸಿಲಿನ ಜೊತೆ ಬಿಸಿಬೇಳೆ ಬಾತ್, ಬೋಂಡಾ, ದೋಸೆ ಚಟ್ನಿ, ಸಿಹಿ ಎಲ್ಲವೂ ಸೇರಿ ಊಟ ಆಹಾ ರುಚಿಯೇ ಎನಿಸಿ ಮತ್ತು ಜಾಸ್ತಿ ತಿನ್ನುವಂತಿತ್ತು. ಊಟದ ನಂತರ ಮತ್ತೆ ಆಟವನ್ನು ಆಡಿದ್ದಾಯ್ತು. ಅಸೋಸಿಯೇಶನ್‌ನ ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿಚಾರ ಮಾಡಿದ್ದಾಯ್ತು. ನಂತರ ಆಟಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ಕಾರ್ಯಕಾರಿ ಸಮಿತಿ ಸದಸ್ಯರುಗಳು ನೀಡಿದರು.

ವಿಜೇತರಾದವರು : ಬಾಟಲಿ ಬೀಳಿಸುವ ಸ್ಪರ್ಧೆ : ಪ್ರಥಮ ಪ್ರತಿಭಾ ಗೌಡ ದ್ವಿತೀಯ : ಎಸ್.ಸಿ. ಹೇಮಲತ


ಎಲೆ ಆಟ : ಪ್ರಥಮ : ಆಶಾಶ್ಯಾಮಸುಂದರ್ ದ್ವಿತೀಯ : ಡಾ. ಅಹಲ್ಯಾಚಿಂತಾಮಣಿ

ಹೌಸಿ ಹೌಸಿ : ಪ್ರಥಮ : ಪ್ರಫುಲ್ಲ ಶೆಟ್ಟಿ ದ್ವಿತೀಯ : ಜಯಾ ಆಚಾರ್ಯ

ಕೊನೆಯದಾಗಿ ಮತ್ತೊಮ್ಮೆ ಹೌಸಿ ಹೌಸಿ ಆಡುವುದರೊಂದಿಗೆ ಪಿಕ್‌ನಿಕ್‌ಗೆ ವಿದಾಯ ಹೇಳಿದ್ದಾಯ್ತು. ಅಚ್ಚುಕಟ್ಟಾಗಿ ಪಿಕ್‌ನಿಕ್ ಅನ್ನು ಕಾರ್ಯಕಾರಿ ಸಮಿತಿಯವರು ಆಯೋಜಿಸಿದ್ದರು. ಅ

**ಎಸ್.ಸಿ. ಹೇಮಲತ**





# ಭಾರತದ ಮಗಳು

ಅನಂತವಾದ ಈ ವಿಶ್ವದ ಮೂಲಶಕ್ತಿಯಾಗಿ ಗುರುತಿಸುವ ಮಹಿಳೆಗೆ ನಮ್ಮ ಸಂಸ್ಕೃತಿಯಲ್ಲಿ ಉನ್ನತ ಸ್ಥಾನಮಾನಗಳನ್ನು ನೀಡಿರುವಂತೆ, ಸಮಾಜವು ಅವಳನ್ನು ಅತ್ಯಂತ ಕೀಳುಮಟ್ಟದಲ್ಲೂ ಕಂಡಿದೆ. ಸೃಷ್ಟಿಯ ಪ್ರಕ್ರಿಯೆಯಲ್ಲಿ ಸಮಪಾಲಿರುವ ಮಹಿಳೆಗೆ ಬದುಕಿನಲ್ಲಿ ಸಮಪಾಲನ್ನು ನೀಡಲು ಸಮಾಜ ಹಿಂಜರಿದಿದೆ. ಶಕ್ತಿಯಾಗಿ ಪೂಜಿಸುವ ಅವಳ ಸ್ವಾತಂತ್ರ್ಯವನ್ನು ಕಸಿದಿದೆ. ಅವಳ ದೌರ್ಜನ್ಯದ ಕಥಾನಕಗಳು ನಮ್ಮ ದಾರ್ಶನಿಕ ಗ್ರಂಥಗಳಾಗಿವೆ. ಆದರೆ ಪ್ರತಿ ಕಾಲಘಟ್ಟದಲ್ಲೂ, ಪ್ರತಿ ಸಮುದಾಯದಲ್ಲೂ ಮಹಿಳೆ ತನ್ನನ್ನು ಹಿಮ್ಮೆಟ್ಟಿಸುವ ಪ್ರವಾಹದ ಎದುರು ಈಜಿ ಸ್ಥೈರ್ಯವನ್ನು ತೋರಿಸಿದ್ದಾಳೆ. ಕತ್ತಲಲ್ಲಿರುವವರಿಗೆ ತಾನೇ ಉರಿದು ಬೆಳಕಾಗಿದ್ದಾಳೆ.

ಆಧುನಿಕತೆಯ ಮಹಾನಗರವೆನಿಸಿದ ದೆಹಲಿಯಲ್ಲಿ ಹೊಸ ಕನಸುಗಳನ್ನು ಹೊತ್ತುಕೊಂಡು ಬದುಕಿಗೊಂದು ಅರ್ಥ ಹುಡುಕಲು ಹೊರಟ ಹುಡುಗಿಯೊಬ್ಬಳು ಹುಡುಗಿಯಾಗಿದ್ದೇ ಅಪರಾಧವೆಂಬಂತೆ ಬಸ್ಸಿನೊಳಗೆ ಛಿದ್ರವಾಗುತ್ತಾಳೆ. ಜತೆಗೆ ಇಂತಹ ಬರ್ಬರತೆಯ ಪ್ರತಿಭಟನೆಗೆ ಪ್ರತೀಕವಾಗಿ ನಿರ್ಭಯಳಾಗುತ್ತಾಳೆ. ಈ ಭಾರತದ ಮಗಳ ಮೇಲಿನ ದೌರ್ಜನ್ಯದ ಕತೆಯ ಒಳಹೊರಗುಗಳನ್ನು ಅರಿಯಲು ಹೊರಟವರನ್ನು ನಾವು ಮತ್ತೆ ಮೌನಗೊಳಿಸುತ್ತೇವೆ. ದೌರ್ಜನ್ಯವೆಸಗುವ ಮಾನಸಿಕ ಸ್ಥಿತಿ ಮತ್ತು ಸಂದರ್ಭಗಳಿಗೆ ಅರ್ಥ ಹುಡುಕುವ ಸಂವಹನದ ಪ್ರಕ್ರಿಯೆಯನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳುವ ಎದೆಗಾರಿಕೆಯನ್ನು ತೋರಿಸದೇ, ಅಂತಹದೇ ಅದೆಷ್ಟೋ ಘಟನೆಗಳಿಗೆ ಬೆನ್ನು ತಿರುಗಿಸುವ ಜಾಣರಾಗುತ್ತೇವೆ.

ದೆಹಲಿಯನ್ನು ನಮ್ಮ ಬದುಕಿನ ನೆಲೆಯನ್ನಾಗಿಸಿದವರು ನಾವು. ನಮ್ಮ ಕುಟುಂಬದ ಮಹಿಳೆಯರೂ ಅನ್ನದ ಬಟ್ಟಲನ್ನು ತುಂಬುವುದರ ಜತೆಗೆ ಅವರೊಳಗಿನ ಕನಸುಗಳಿಗೆ ರೆಕ್ಕೆ ಬಿಚ್ಚಿ ಹಾರಾಡಲು ನೀಲಿ ಆಕಾಶವನ್ನು ಇಲ್ಲಿಯೇ ಬಾಚಿಕೊಳ್ಳುತ್ತಾರೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಕನ್ನಡ ಮಹಿಳೆಯರ ಸಂಘಟನಾ ಗುಂಪುಗಳು ಮಹಿಳೆಯರ ಸಾಧನೆಗಳನ್ನು ಮತ್ತು ಲಿಂಗ ಸಮಾನತೆಯನ್ನು ಆಚರಿಸುವ ಅಂತರಾಷ್ಟ್ರೀಯ ಮಹಿಳಾ ದಿನದ ಜಾಗೃತಿಯ ಸಂದೇಶವನ್ನು ಹಂಚುತ್ತಾ ಮಹಿಳೆಯೆಂಬ ವಿಶೇಷಣದ ಹೊರಗೆ ನಿಂತು, ಭೇದದ ಸರಪಳಿಯನ್ನು ಕಳಚಿ ಮುಂದಡಿಯಿಡುವ ಮುಕ್ತ ಮನಸುಗಳಿಗೆ ದಾರಿ ಮಾಡಬೇಕು.

*ಬಾಲಕೃಷ್ಣ ನಾಯ್ಕ್ ಡಿ.*

## ಓದುಗರ ಪತ್ರ




### ಡಾ. ಮಹಿಷಿಯವರ ಪೂರ್ತಿ ಚಿತ್ರಣ

ಅಭಿಮತದ ಫೆಬ್ರವರಿ 2015ರ ಸಂಚಿಕೆ ಬಂತು. ಡಾ. ಸರೋಜಿನಿ ಮಹಿಷಿ ಅವರ ನಿಧನದ ನಂತರ ಮಹಿಷಿ ವರದಿ ಎಂದೆಲ್ಲ ಜಪಿಸುತ್ತಿರುವ ಇಡೀ ಕರ್ನಾಟಕದ ಮಾಧ್ಯಮಗಳಲ್ಲಿ ಒಂದು ಸಾಲಿನ ಶೋಕ ಸಂದೇಶ, ಕಿಂಚಿತ್ ಪರಿಚಯ ಬಿಟ್ಟರೆ ಏನೂ ಬಂದಿರಲಿಲ್ಲ. ಅಭಿಮತದಲ್ಲಿ ಅವರ ಅಷ್ಟು ಪ್ರೊಫೈಲು ಚಿತ್ರಣವನ್ನು ಕೊಟ್ಟು ಅಗಲಿದ ಚೇತನಕ್ಕೆ ನ್ಯಾಯ ಒದಗಿಸಿ ಅಭಿನಂದನೆಗಳಿಗೆ ಪಾತ್ರರಾಗಿದ್ದೀರಿ. ಉಳಿದಂತೆ ಸಂಚಿಕೆ ಸರ್ವಾಂಗ ಸುಂದರವಾಗಿ ಬಂದಿದೆ. ಕೀಪ್ ಇಟ್ ಅಪ್. ಅ

*ಕೃಷ್ಣ ಕೊಲ್ಹಾರ ಕುಲಕರ್ಣಿ*

## ಆತ್ಮೀಯ ಬೀಳ್ಕೊಡುಗೆ

ದೆಹಲಿಯಿಂದ ವರ್ಗಾವಣೆಗೊಂಡು ಬೆಂಗಳೂರಿಗೆ ತೆರಳುತ್ತಿರುವ ಕರ್ನಾಟಕ ಭವನದ ಜಂಟೀ ನಿವಾಸೀ ಆಯುಕ್ತರಾದ, ಶ್ರೀ ಸುಪ್ರಸನ್ನ ಮತ್ತು ಶ್ರೀಮತಿ ಸುಜಾತ ಸುಪ್ರಸನ್ನ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಇದೇ ಫೆಬ್ರವರಿ 19ರಂದು ನಡೆದ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅವರು ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಬೀಳ್ಕೊಟ್ಟರು. ಇದೇ ಸಂದರ್ಭದಲ್ಲಿ ಹೊಸದಾಗಿ ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತರಾಗಿ ಬಂದ ಶ್ರೀ ಶ್ರೀಕಾಂತ್ ಅವರನ್ನು ಹೂಗುಚ್ಛ ನೀಡಿ ಸ್ವಾಗತಿಸಿದರು.

ಸಮಯ ಟಿ.ವಿ.ಯ ದೆಹಲಿ ವರದಿಗಾರರಾಗಿದ್ದ ಶ್ರೀ ಮಧು ನಾಯಕ್ ಅವರು ವೃತ್ತಿ ನಿಮಿತ್ತ ಮರಳಿ ಬೆಂಗಳೂರಿಗೆ ತೆರಳಿದ ಸಂದರ್ಭದಲ್ಲಿ ಅವರನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಬೀಳ್ಕೊಟ್ಟರು. ಅ








ವೈಜ್ಞಾನಿಕ ತಳಹದಿಯ

SARAL VAASTU®
The Fine Art of Happy Living




ಡಾ|| ಶ್ರೀ ಚಂದ್ರಶೇಖರ ಗುರೂಜಿಯವರಿಂದ
14-03-2015 ರಂದು ಸಂಜೆ 5 ಘಂಟೆಗೆ ಸರಳವಾಸ್ತು
ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
ದೆಹಲಿ ಕರ್ನಾಟಕ ಸಂಘ, ರಾವ್ ತುಲಾರಾಂ ಮಾರ್ಗ, ಸೆಕ್ಟರ್ 12,
ಆರ್. ಕೆ. ಪುರಂ, ನವ ದೆಹಲಿ-110022.
ಉಚಿತ ಪ್ರವೇಶ
ಜೀವನದ ಎಲ್ಲ ಸಮಸ್ಯೆಗಳಿಂದ ಸರಳವಾಸ್ತುವಿನ ಮೂಲಕ ಪರಿಹಾರ ಪಡೆಯಬಹುದು.
ಕಟ್ಟಡ ಒಡೆಯಬೇಕಿಲ್ಲ ! ಬದಲಾವಣೆಯ ಅವಶ್ಯಕತೆಯಿಲ್ಲ !!

CG Parivar®
We make everyone happy

ಈಗ ನವ ದೆಹಲಿಯಲ್ಲಿ ಸರಳವಾಸ್ತು ಕಛೇರಿಯನ್ನು ಪ್ರಾರಂಭಿಸಲಾಗಿದೆ.
ಹೌಸ ನಂ: 5, ಮಾಲ್ ರೋಡ್, ಶಾಂತಿ ಕುಂಜ,
ವಸಂತ ಕುಂಜ, ನವ ದೆಹಲಿ-110070
ಸಂಪರ್ಕಿಸಿ : +91 8588920616

Delhi Karnataka Sangha Abhimatha Monthly,
March -2015, Vol. No.25, Issue No.5, Price Rs.1/- RNI Regn. No. 53405/91, DL-SW-1/4016/13-15
Printout Date : Mar. 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

